ದಾವಣಗೆರೆ ನಗರವಾಣಿ
ಸುವರ್ಣ ಮಹೋತ್ಸವ ವರ್ಷದಲ್ಲಿ
54 ನೇ ವರ್ಷಕ್ಕೆ ಪಾದಾರ್ಪಣೆ
1973-2026

ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ಹಾವೇರಿ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಕನ್ನಡ ದೈನಿಕ

# ನಗರವಾಣಿ
ದಾವಣಗೆರೆ

ಸಂಸ್ಥಾಪಕ ಸಂಪಾದಕರು: ಸಿ.ಕೇಶವಮೂರ್ತಿ ಪ್ರಧಾನ ಸಂಪಾದಕರು: ಡಾ॥ ಸಿ.ಕೆ.ಜಯಂತ್ ಸಹ ಸಂಪಾದಕರು: ಬಿ.ಎನ್.ಮಲ್ಲೇಶ್

ಸಂಪುಟ: 54 ಸಂಚಿಕೆ: 46 DEVANGERE E nagaravani.com mail: dngrvani@gmail.com ರಿ.ನಂ.24916/73 KA/SK/DVG -012/2026-28 ಶನಿವಾರ, ಜೂನ್ 20, 2026 ದೂರವಾಣಿ: 08192-254186 ಬೆಲೆ: 3.00 ರೂ. ಪುಟಗಳು-4

ಜಗಳೂರಿನಲ್ಲಿ ಪತ್ರಿಕೆಗೆ ಸಂಪರ್ಕಿಸಿ
ನಗರವಾಣಿ
ಜಗಳೂರಿನಲ್ಲಿ ಪತ್ರಿಕೆಗೆ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ
ಮಂಜಪ್ಪ ಕೆ, ಪ್ರತಿನಿಧಿ
ಮೊಬೈಲ್: 7899872896

### ಪರಿಷತ್ ಚುನಾವಣೆಯಲ್ಲಿ ರಾಜ್ಯ ಬಿಜೆಪಿಗೆ ತೀವ್ರ ಮುಜುಗರ

## ಅಡ್ಡ ಮತದಾನ; ರಾಜ್ಯ ಬಿ.ಜೆ.ಪಿ ವರಿಷ್ಠರಿಗೆ ಹೈಕಮಾಂಡ್ ಬುಲಾವ್-ತಲೆದಂಡ ಸಾಧ್ಯತೆ




ಬೆಂಗಳೂರು:ಕರ್ನಾಟಕವಿಧಾನಪರಿಷತ್ ಚುನಾವಣೆಯಲ್ಲಿ ತನ್ನ ಶಾಸಕರು ಅಡ್ಡ ಮತದಾನ ಮಾಡಿದ್ದಕ್ಕೆ ಬಿಜೆಪಿ ಹೈಕಮಾಂಡ್ ತೀವ್ರ ಅಸಮಾಧಾನಗೊಂಡಿದ್ದು, ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಮತ್ತು ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಅವರಿಗೆ ಜೂನ್ 23 ರಂದು ದೆಹಲಿಗೆ ಬರುವಂತೆ ಬುಲಾವ್ ನೀಡಲಾಗಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ವಿಧಾನಪರಿಷತ್ 7 ಸ್ಥಾನಗಳಿಗೆಗುರುವಾರ ನಡೆದ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನ 11 ಶಾಸಕರು ಅಡ್ಡ ಮತದಾನ ಮಾಡಿದ್ದಾರೆ. ಇದನ್ನು ಗಂಭಿರವಾಗಿ ಪರಿಗಣಿಸಿರುವ ಬಿಜೆಪಿ ಹೈಕಮಾಂಡ್. ರಾಜ್ಯ ನಾಯಕರಿಗೆ ಬುಲಾವ್ ನೀಡಿದೆ.

ಬಿಜೆಪಿ ಜೆಡಿಎಸ್ ಶಾಸಕರ ಅಡ್ಡ ಮತದಾನ ಮಾಡಿದ ಪರಿಣಾಮ ಕಾಂಗ್ರೆಸ್‌ಗೆ ಹೆಚ್ಚುವರಿಯಾಗಿ 11 ಮತಗಳು ಬಂದಿದ್ದು ಮೈತ್ರಿಗೆ ಸೋಲು ಮತ್ತು ತೀವ್ರ ಮುಜುಗರ ಉಂಟಾಗಿದೆ.ಇದು ಮುಂದಿನ ದಿನಗಳಲ್ಲಿ ಮೈತ್ರಿ ಮೇಲೆ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದ್ದು, ಬಿಜೆಪಿ ಅಡ್ಡ ಮತದಾನ ಮಾಡಿದ್ದಕ್ಕೆ ರಾಜ್ಯ ನಾಯಕರ ಮೇಲೆ ಹೈಕಮಾಂಡ್ ಕೆಂಡಾಮಂಡಲವಾಗಿದ್ದು ವರದಿ ನೀಡುವಂತೆ ಸೂಚಿಸಿದೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನವನ್ನು ಗಂಭೀರವಾಗಿ ಪರಿಗಣಿಸಿರುವ ಬಿಜೆಪಿ, ಇದರ ತನಿಖೆಗಾಗಿ ಹಾಗೂ ತಪ್ಪಿತಸ್ಥರನ್ನು ಗುರುತಿಸಲು ಸಿ.ಟಿ. ರವಿ, ಎನ್. ಮಹೇಶ್ ಮತ್ತು ಮಹೇಶ್ ಟೆಂಗಿನಕಾಯಿ ಅವರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಿದೆ.

ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಶಾಸಕರು ಅಡ್ಡ ಮತದಾನ ಮಾಡಿರುವುದು ಪಕ್ಷಕ್ಕೆ ದೊಡ್ಡ ಹಿನ್ನಡೆಯನ್ನುಂಟುಮಾಡಿದೆ. ಪಕ್ಷದ ನಿರೀ-ಕ್ಷೆಯಂತೆ ಮತಗಳು ಬೀಳದೆ, 4 ರಿಂದ 5 ಬಿಜೆಪಿ ಶಾಸಕರು ಮತ್ತು 6 ರಿಂದ 7 ಜೆಡಿಎಸ್ ಶಾಸಕರು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಚಲಾಯಿಸಿದ್ದಾರೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

"ನಮ್ಮ ಪಕ್ಷದ ಶಾಸಕರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ. ಅವರನ್ನು ಕ್ಷಮಿಸಲಾಗುವುದಿಲ್ಲ. ಈ ನಾಟಕವನ್ನು ಯಾರು ಆಡಿರಬಹುದು ಎಂಬುದರ ಕುರಿತು ನಮಗೆ ಕೆಲವು ಮಾಹಿತಿಯೂ ಇದೆ" ಎಂದು ಅವರು ಹೇಳಿದರು.

ಪರಿಸ್ಥಿತಿಯ ಬಗ್ಗೆ ವಿವರಿಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಭೇಟಿ ಮಾಡಲು ಸಮಯ ಕೋರಿದ್ದೇನೆ ಎಂದು ವಿಜಯೇಂದ್ರ ಹೇಳಿದ್ದಾರೆ.

"ನಾನು ಇಂದು ಬೆಳಗ್ಗೆ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ಅಪಾಯಿಂಟ್ಮೆಂಟ್ ಕೋರಿ ದ್ದೇನೆ. ರಾಜ್ಯದ (3ನೇ ಪುಟಕ್ಕೆ)

### 16 ಮಂದಿ ಬಲಿ, ಶಾಂತಿ ಮಾತುಕತೆ ಮುಂದೂಡಿಕೆ

## ಇಸ್ರೇಲ್ ವೈಮಾನಿಕ ದಾಳಿಗೆ ತತ್ತರಿಸಿದ ಲೆಬನಾನ್; ಮತ್ತೆ ಯುದ್ಧದ ಕಾರ್ಮೋಡ!



ಜೆರುಸಲೇಮ್: ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ಪಡೆಗಳು ರಾತ್ರೋರಾತ್ರಿ ನಡೆಸಿದ ಭೀಕರ ವಾಯುದಾಳಿಯಲ್ಲಿ ಕನಿಷ್ಠ 16 ಜನರು ಸಾವನ್ನಪ್ಪಿದ್ದಾರೆ. ಈ ಹಠಾತ್ ಸಂಘರ್ಷದಿಂದಾಗಿ ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯಬೇಕಿದ್ದ ಅಮೆರಿಕಾ ಮತ್ತು ಇರಾನ್ ನಡುವಿನ ಅತ್ಯಂತ ನಿರ್ಣಾಯಕ ಶಾಂತಿ ಮಾತುಕತೆಗಳು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿವೆ.

ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ದಕ್ಷಿಣ ಲೆಬನಾನ್‌ನ ತೈರ್ ನಗರದ ಜಬಲ್ ಅಮೆಲ್ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳ ಮೇಲೆ ತೀವ್ರ ಬಾಂಬ್ ದಾಳಿ ನಡೆಸಿವೆ. ಪರಿಣಾಮ ಆಸ್ಪತ್ರೆ ಸಮೀಪದ ಹಲವಾರು ಕಟ್ಟಡಗಳು ಧ್ವಂಸಗೊಂಡಿದ್ದು, ಕನಿಷ್ಠ 16 ಮಂದಿ ಸಾವನ್ನಪ್ಪಿದ್ದಾರೆಂದು ತಿಳಿದುಬಂದಿದೆ.

ಇಸ್ರೇಲ್ ಸೇನೆ, ದಕ್ಷಿಣ ಲೆಬನಾನ್‌ನ ವಿವಿಧ ಪ್ರದೇಶಗಳಲ್ಲಿ ರಾತ್ರಿ ಪೂರ್ತಿ ಕಾರ್ಯಾಚರಣೆ ನಡೆಸಿರುವುದಾಗಿ ತಿಳಿಸಿದೆ. ಇದೇ ವೇಳೆ, ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆ ಈ ಭಾಗದಲ್ಲಿ ತೀವ್ರ ಯುದ್ಧ ನಡೆಯುತ್ತಿರುವುದಾಗಿ ಹೇಳಿದೆ.

ಲೆಬನಾನ್‌ನಲ್ಲಿ ಮುಂದುವರಿದಿರುವ ಈ ಹಿಂಸಾಚಾರ, ಅಮೆರಿಕಾ-ಇರಾನ್ ನಡುವಿನ ಹೊಸ ಒಪ್ಪಂದಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ಈ ಒಪ್ಪಂದದ ಪ್ರಕಾರ. (3ನೇ ಪುಟಕ್ಕೆ)

### ಲೆಬನಾನ್ ಅನ್ನು ಸುಟ್ಟು ಬೂದಿ ಮಾಡಬೇಕು: ಗುಡುಗಿದ ಇಸ್ರೇಲ್

ಜೆರುಸಲೇಮ್: ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದರೂ ಪಶ್ಚಿಮ ಏಷ್ಯಾದಲ್ಲಿ ಮತ್ತೊಮ್ಮೆ ಉದ್ವಿಗ್ನತೆ ಉಂಟಾಗಿದ್ದು, ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಪಡೆಗಳು ರಾತ್ರೋರಾತ್ರಿ ನಡೆಸಿದ ಭೀಕರ ವೈಮಾನಿಕ ದಾಳಿಯಲ್ಲಿ ಕನಿಷ್ಠ 16 ಜನ ಮೃತಪಟ್ಟಿದ್ದಾರೆ.

ಲೆಬನಾನ್ ಮೇಲೆ ಇಸ್ರೇಲ್ ವಾಯುಪಡೆ ದಾಳಿ ಮುಂದುವರೆಸಿದ್ದು, ಬೆಕಾ ಕಣಿವೆಯಲ್ಲಿರುವ ಹೆಜ್ಬೊಲ್ಲಾ ಭಯೋತ್ಪಾದಕ ಸಂಘಟನೆಯ ಮೂಲಸೌಕರ್ಯದ ಮೇಲೆ ದಾಳಿ ಮಾಡಲಾಗಿದೆ. ಇದು ಹೆಜ್ಬೊಲ್ಲಾ ಭಯೋತ್ಪಾದಕ ಸಂಘಟನೆಯಿಂದ ಪದೇ ಪದೇ ಕದನ ವಿರಾಮ ಉಲ್ಲಂಘನೆಗೆ ಪ್ರತಿಕ್ರಿಯೆ" ಎಂದು ಹೇಳಿದೆ.

ಇರಾನ್ ಬೆಂಬಲಿತ ಹೆಜ್ಬೊಲ್ಲಾ ಭಯೋತ್ಪಾದಕರು ಪದೇಪದೆ ಕದನ ವಿರಾಮ ಉಲ್ಲಂಘಿಸಿ ದಾಳಿ ನಡೆಸಿದ್ದು, ದಾಳಿಯಲ್ಲಿ ಇಸ್ರೇಲ್ ನ 52ನೇ ಬೆಟಾಲಿಯನ್‌ನ ಕಮಾಂಡರ್ ಲೆಫ್ಟಿನೆಂಟ್ ಕರ್ನಲ್ ಡೋರ್ ಗೆಡಾಲಿಯಾ ಬೆನ್ ಸಿಮ್ಹಾನ್ (32) ಮೃತಪಟ್ಟಿದ್ದಾರೆ ಮತ್ತು ಐವರು ಸೈನಿಕರು ಗಾಯಗೊಂಡಿದ್ದಾರೆ. ಈ ದಾಳಿಗೆ ಪ್ರತೀಕಾರವಾಗಿ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. (3ನೇ ಪುಟಕ್ಕೆ)

## ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಸಂದೇಶ; ಕಲಾಪ ಮುಂದೂಡಿಕೆ



ದಾ ನಗರವಾಣಿ ಸುದ್ದಿ

ದಾವಣಗೆರೆ.ಜೂ.19: ದಾವಣಗೆರೆ ಜಿಲ್ಲಾ ನ್ಯಾಯಾಲಯವನ್ನು ಎರಡು ಗಂಟೆಯೊಳಗೆ ಸ್ಫೋಟ ಮಾಡುವುದಾಗಿ ಬೆದರಿಕೆ ಸಂದೇಶ ನ್ಯಾಯಾಲಯದ ಅಧಿಕೃತ ಈ ಮೇಲ್‌ಗೆ ಬಂದಿದ್ದು, ಇದರಿಂದ ಜಿಲ್ಲಾ ನ್ಯಾಯಾಲಯದಲ್ಲಿ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳ ಪರಿಶೀಲನೆ ನಡೆಸಿತು.

ನಗರದ ಪಿಬಿ ರಸ್ತೆ ಬಳಿ ಇರುವ ಜಿಲ್ಲಾ ನ್ಯಾಯಾಲಯದಲ್ಲಿ ಮಧ್ಯಾಹ್ನ 2 ಗಂಟೆಗೆ ಬಾಂಬ್ ಸ್ಫೋಟ ಮಾಡುವುದಾಗಿ ಕೇರಳಂನ ವಯನಾಡ್‌ನಿಂದ ಜಿಲ್ಲಾ ನ್ಯಾಯಾಲಯದ ಅಧಿಕೃತ ಇಮೇಲ್‌ಗೆ ಸಂದೇಶ ಬಂದಿದ್ದು, ಇದ-ರಿಂದ ನ್ಯಾಯಾಲಯದಲ್ಲಿ ಕೆಲಕಾಲ ಭಯದ ವಾತಾವರಣ ನಿರ್ಮಾಣವಾಗಿತ್ತು, (4ನೇ ಪುಟಕ್ಕೆ)

## ಬಿಜೆಪಿಯಲ್ಲಿರುವ ಮೀರ್ ಸಾಧಿಕ್‌ಗಳನ್ನು ಬಿಡುವ ಪ್ರಶ್ನೆಯೇ ಇಲ್ಲ : ವಿಜಯೇಂದ್ರ

ಬೆಂಗಳೂರು: ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನದ ಮೂಲಕ ಪಕ್ಷಕ್ಕೆ ಹಾಗೂ ಮೈತ್ರಿಗೆ ದ್ರೋಹ ಬಗೆದವರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಮತ್ತು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ನಿಶ್ಚಿತ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ನಿನ್ನೆ ನಡೆದ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಆರೇಳು ಜನ ಹಾಗೂ ಬಿಜೆಪಿಯಿಂದ ನಾಲ್ಕೈದು ಜನ ಅಡ್ಡ ಮತದಾನ ಮಾಡಿದ್ದಾರೆ. ಈ ಘಟನೆ ನಿಜಕ್ಕೂ ಆಗಬಾರದಿತ್ತು, ದುರಾದೃಷ್ಟವಶಾತ್ ನಡೆದುಹೋಗಿದೆ. ಯಾರ್ಯಾರು ಬೆನ್ನಿಗೆ ಇರಿದು ಆಟ ಆಡಿದ್ದಾರೆ ಎನ್ನುವ ಸಂಪೂರ್ಣ ಮಾಹಿತಿ ಸದ್ಯ ನಮ್ಮ ಬಳಿ ಇದೆ. ಇವತ್ತು ಅಥವಾ ನಾಳೆಯೊಳಗೆ ಇದರ ಸಂಪೂರ್ಣ ಚಿತ್ರಣ ನಮಗೆ ಸಿಗಲಿದೆ, ಇದನ್ನು ಗೌಪ್ಯವಾಗಿ ಇಡುವುದಿಲ್ಲ, ಶೀಘ್ರದಲ್ಲೇ ಹೈಕಮಾಂಡ್ ನಾಯಕರಿಗೆ ಈ ಪಟ್ಟಿಯನ್ನು ಸಲ್ಲಿಸಿ ಮುಂದಿನ ಕ್ರಮಕ್ಕೆ ಶಿಫಾರಸು ಮಾಡುತ್ತೇನೆ ಎಂದು ತಿಳಿಸಿದರು.

ಮೈತ್ರಿ ಪಕ್ಷದ ಅಭ್ಯರ್ಥಿಯ ಸೋಲಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮದ ಎಚ್ಚರಿಕೆ ನೀಡಿರುವ ಅವರು, ಇದು ಹೆತ್ತ ತಾಯಿಗೆ ಮಾಡಿದ ಮೋಸ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಪಕ್ಷದ ಚಿಹ್ನೆಯಿಂದ ಗೆದ್ದು ಬಂದು ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ವಾಗ್ದಾಳಿ ನಡೆಸಿದ ವಿಜಯೇಂದ್ರ, ಬಿಜೆಪಿ ಚಿಹ್ನೆಯಡಿ ಗೆದ್ದವರು ಪಕ್ಷಕ್ಕೆ ಹೀಗೆ ಅನ್ಯಾಯ ಮಾಡುವುದನ್ನು (4ನೇ ಪುಟಕ್ಕೆ)

## ಚೀನಾದಲ್ಲೂ ಇದೆ ಘೋರ ಜಾತಿ ಪದ್ಧತಿ, ಹುಳುಕು ಬಿಟ್ಟಿಟ್ಟ ಭಾರತದ ನೆಟ್ಟಿಗರು!

ನವದೆಹಲಿ (ಜೂ.19): ವಿಶ್ವದ ಮ್ಯಾನುಫ್ಯಾಕ್ಚರಿಂಗ್ ಹೌಸ್ (ಉತ್ಪಾದನಾ ಕೇಂದ್ರ) ಹಾಗೂ ಕಮ್ಯುನಿಸ್ಟ್ ಪಕ್ಷದಿಂದ ಆಳಲ್ಪಡುವ ಸೋಷಿಯಲಿಸ್ಟ್ (ಸಮಾಜವಾದಿ) ರಾಷ್ಟ್ರವಾಗಿರುವ ಚೀನಾದಲ್ಲಿ ಜನ್ಮಜಾತ ಆಧಾರಿತ ಜಾತಿ ಪದ್ಧತಿ ಜಾರಿಯಲ್ಲಿದೆ ಎಂಬ ಗಂಭೀರ ಆರೋಪವೊಂದು ಇಂಟರ್ನೆಟ್‌ನಲ್ಲಿ ಕೇಳಿಬರುತ್ತಿದೆ. ಈ ಪದ್ಧತಿಯು ಅಲ್ಲಿನ ಜನರ ಶಿಕ್ಷಣ, ಆರೋಗ್ಯ ಮತ್ತು ಬದುಕಿನ ಅವಕಾಶಗಳನ್ನು ನಿರ್ಧರಿಸುತ್ತಿದೆ ಎಂದು ಭಾರತದ ನೆಟ್ಟಿಗರು ಚೀನಾದ ವ್ಯವಸ್ಥೆಯ ಚಿತ್ರಣವನ್ನು ನೀಡಿದ್ದಾರೆ. ಹಾಗಾದರೆ ಚೀನಾದಲ್ಲಿ ನಿಜವಾಗಿಯೂ ಜಾತಿ ಪದ್ಧತಿ ಇದೆಯೇ? ಇದರ ಅಸಲಿ ವಾಸ್ತವ ಇಲ್ಲಿದೆ ನೋಡಿ.

ಚೀನಾ ದೇಶವು ಅಧಿಕೃತವಾಗಿ ಸಮಾಜವಾದಿ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಚೀನಾದ ಸುಂದರ ವಿಡಿಯೋಗಳು, ಅಲ್ಲಿನ ಬಹತ್ ಕಟ್ಟಡಗಳು ಹಾಗೂ ವ್ಯವಸ್ಥೆಗಳನ್ನು ಪುಂಖಾನುಪುಂಖವಾಗಿ ವೈರಲ್ ಮಾಡಲಾಗಿತ್ತು. ಆದರೆ, ಅಲ್ಲಿರುವ ಕೆಲ ಭಾರತೀಯರು ನಿಜವಾದ ಚೀನಾವನ್ನು ಜಗತ್ತಿಗೆ ತೋರಿಸಿದ್ದು ಮಾತ್ರವಲ್ಲದೆ, ಭಾರತದಂತೆ ಚೀನಾದಲ್ಲೂ ಕೂಡ ಹುಟ್ಟಿನಿಂದಲೇ ಜಾತಿ ಪದ್ಧತಿ ಅನ್ನೋದು ಇದೆ ಎಂದು ಹೇಳಿದ್ದಾರೆ.

ಭಾರತದ ಎಕ್ಸ್ ಯೂಸರ್‌ಗಳು ಚೀನಾದ ಸಾಮಾಜಿಕ ರಚನೆಯನ್ನು ಭಾರತದ ಜಾತಿ ಪದ್ಧತಿಗೆ ಹೋಲಿಸಿ ಪೋಸ್ಟ್‌ಗಳನ್ನು ಹಾಕಲಾರಂಭಿಸಿದ ಮೇಲೆ ಈ ಚರ್ಚೆ ಮತ್ತಷ್ಟು ತೀವ್ರವಾಗಿದೆ. ಒಬ್ಬ ವ್ಯಕ್ತಿಯ ಪ್ರಗತಿಯು ಅವನು ಯಾವ ಜಾತಿಯಲ್ಲಿ ಹುಟ್ಟುತ್ತಾನೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ ಎಂದು ಹೇಳಿದ್ದು, ಇದಕ್ಕೆ ಅವರು ಚೀನಾದ 'ಹುಕೋವ್' ಹೌಸ್‌ಹೋಲ್ಡ್ ರಿಜಿಸ್ಟ್ರೇಷನ್ ಸಿಸ್ಟಮ್ ಅನ್ನು ಉದಾಹರಣೆಯಾಗಿ ನೀಡಿದ್ದಾರೆ. ಈ ವ್ಯವಸ್ಥೆಯು ಶಿಕ್ಷಣ, ಆರೋಗ್ಯ, (4ನೇ ಪುಟಕ್ಕೆ)

## ಚುನಾವಣೆ ಗೆಲ್ಲಲು ಬಿಜೆಪಿ ಮಾದರಿಯನ್ನೇ ಡಿಕೆಶಿ ಅಳವಡಿಸಿದ್ದಾರೆ: ಜಾರಕಿಹೊಳಿ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವ ನಿಟ್ಟಿನಲ್ಲಿ ಸಿಎಂ ಡಿಕೆ ಶಿವಕುಮಾರ್ ಅವರು ಬಿಜೆಪಿ ನಾಯಕರ ದೆಹಲಿ ಮಾದರಿಯನ್ನೇ ಅಳವಡಿಕೆ ಮಾಡಿದ್ದಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ವ್ಯಾಖ್ಯಾನಿಸಿದ್ದಾರೆ.

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ವಿಚಾರ ಸಚಿವ ಸತೀಶ್ ಜಾರಕಿಹೊಳಿ ಮಾತನಾಡಿ, ಎರಡೂ ಪಕ್ಷದಿಂದ ಕ್ರಾಸ್ ಓಟ್ ಆಗಿದೆ, ಅವರು ಕೂಡ ಒಪ್ಕೊಂಡಿದ್ದಾರೆ. ಬೇರೆಯವರು ಹಾಕಿದ್ದಕ್ಕೆ ನಮಗೆ 32 ಮತಗಳು ಸಿಕ್ಕಿದೆ. ಸಿಎಂ ಡಿಕೆ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರಾದ ಬಿಕೆ ಹರಿಪ್ರಸಾದ್ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಪ್ರಯತ್ನ ಇದರಲ್ಲಿದೆ ಎಂದರು.

ದೆಹಲಿಯಲ್ಲಿ ಏನು ನಡೆ-ಯುತ್ತಿದೆಯೋ ಅದೇ ಕರ್ನಾಟಕದಲ್ಲಿ ನಡೆಯುತ್ತಿದೆ. ದೆಹಲಿಯಲ್ಲಿ ಈಗಾಗಲೇ ಇದು ಪೀಕ್‌ಗೆ ಹೋಗಿದೆ, ಅದನ್ನೇ ಕರ್ನಾಟಕದಲ್ಲಿ ಮಾಡಲಾಗಿದೆ. ಬಿಜೆಪಿಯ ಮಾಡೆಲ್ ಅನ್ನು ನಮ್ಮ ಸಿಎಂ ಡಿಕೆ ಶಿವಕುಮಾರ್ ಅಳವಡಿಕೆ ಮಾಡಿಕೊಂಡಿದ್ದಾರೆ. ಕಾಂಗ್ರೆಸ್ ಮೊದಲ ಬಾರಿ ಬಿಜೆಪಿ ಮಾಡೆಲ್‌ನ್ನ ಅಳವಡಿಕೆ ಮಾಡಿದೆ ಎಂದರು.

ಚುನಾವಣೆಯಲ್ಲಿ ಕುದುರೆ ವ್ಯಾಪಾರ ಅಂತ ಹೇಳೋಕೆ ಸ್ಪಷ್ಟತೆ ಇಲ್ಲ. ಆದರೆ ಅವರು ಮತ ಹಾಕಿರೋದು ನಿಜ . ಸ್ನೇಹದ ಕಾರಣಕ್ಕಾಗಿ ಹಾಕಿರಬಹುದು ಅವರವರ ಬಾಂಧವ್ಯದ ಕಾರಣ-ಕ್ಕಾಗಿ (4ನೇ ಪುಟಕ್ಕೆ)

## ನೀಟ್ ಪರೀಕ್ಷೆ ಸುಸೂತ್ರವಾಗಿ ನಡೆಸಿ: ಜಿಲ್ಲಾಧಿಕಾರಿ ಆದೇಶ



ದಾವಣಗೆರೆ,ಜೂ.19 : ಜೂ.21 ರಂದು ನಡೆಯುವ ನೀಟ್ ಪರೀಕ್ಷೆಗಳು ನಡೆ-ಯುತ್ತಿದ್ದು, ಪರೀಕ್ಷೆಯ ಯಶಸ್ವಿಗೆ ಅಧಿಕಾರಿ ಮತ್ತು ಸಿಬ್ಬಂದಿಗಳು ಶ್ರಮಿಸಬೇಕೆಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ತಿಳಿಸಿದರು.

ಶುಕ್ರವಾರ( ಜೂ.19) ಜಿಲ್ಲಾಧಿಕಾರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ನೀಟ್ ಪರೀಕ್ಷೆಯ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಟ್ಟು 7416 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಜೂ.21 ರಂದು 13 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ,

ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯ ಮೂಲ ಸೌಕರ್ಯಗಳಾದ ವಿದ್ಯುತ್, ಕುಡಿಯುವ ನೀರು, ಗಾಳಿ ಬೆಳಕು, ಶೌಚಾಲಯ ವ್ಯವಸ್ಥೆ, ತುರ್ತು ವೈದ್ಯಕೀಯ ಸೌಲಭ್ಯಗಳನ್ನು ಕಡ್ಡಾಯವಾಗಿ ಕಲ್ಪಿಸಬೇಕು. ಪ್ರಶ್ನೆ ಪತ್ರಿಕೆಗಳ ಸುರಕ್ಷತೆ ಸಾಗಣೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು, ಪೊಲೀಸ್ ಬಂದೋಬಸ್ತ್ ಹಾಗೂ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿಗೊಳಿಸುವ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪರೀಕ್ಷಾರ್ಥಿಗಳು ಯಾವುದೇ ವಿಧವಾದ ಕೈ ಗಡಿಯಾರವನ್ನು ಕಡ್ಡಾಯವಾಗಿ ಧರಿಸುವಂತಿಲ್ಲ. ಕೊಠಡಿಗಳಲ್ಲಿ ಗೋಡೆ ಗಡಿಯಾರದ ವ್ಯವಸ್ಥೆ ಮಾಡಲಾಗಿರುತ್ತದೆ. ಪರೀಕ್ಷೆ ದಿನದಂದು ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ವಿಶೇಷಚೇತನ ವಿದ್ಯಾರ್ಥಿಗಳಿಗೆ ಯುಬಿಡಿಟಿ ಕಾಲೇಜು ಮತ್ತು ಕೇಂದ್ರೀಯ ವಿದ್ಯಾಲಯದಲ್ಲಿ ಪರೀಕ್ಷೆ ಬರೆಯುವಂತೆ ಅನುವು ಮಾಡಿದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳ ತಪಾಸಣಾ ಕಾರ್ಯಕ್ಕೆ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು. (3ನೇ ಪುಟಕ್ಕೆ)

## ನಾಟಕಗಳು ಸಮಾಜದ ಕೈಗನ್ನಡಿ ಇದ್ದಂತೆ ನೋಡಿ ಪ್ರೋತ್ಸಾಹಿಸಬೇಕು: ಬಸವಪ್ರಭು ಶ್ರೀ



ದಾವಣಗೆರೆ,ಜೂ.19 : ನಾಟಕಗಳು ಸಮಾಜದ ಕೈಗನ್ನಡಿ ಇದ್ದಂತೆ. ಅವು ಸಮಾಜದಲ್ಲಿರುವ ಅಂಕು-ಡೊಂಕು ತಿದ್ದಿ ಹೇಳುವ ಶಿಕ್ಷಕನಾಗಿವೆ. ಜೀವನ ಶಿಕ್ಷಣ ನೀಡುವ ಪಾಠಶಾಲೆಯಾಗಿವೆ ಎಂದು ವಿರಕ್ತಮಠದ ಡಾ.ಬಸವಪ್ರಭು ಸ್ವಾಮೀಜಿ ಹೇಳಿದರು.

ಇಲ್ಲಿನ ಹಳೆ ಪಿಬಿ ರಸ್ತೆಯ ವಿನೋಬನಗರದ 1ನೇ ಮುಖ್ಯರಸ್ತೆಯ ಶ್ರೀಮತಿ ಗೌರಮ್ಮ ನರಹರಿ ಶೇಟ್ ಕಲ್ಯಾಣ ಮಂಟಪದ ಪಕ್ಕದಲ್ಲಿರುವ ಜಾಗದಲ್ಲಿ ಶುಕ್ರವಾರ ವಿಜಯಪುರ ಜಿಲ್ಲೆಯ ಕಮತಗಿ ಶ್ರೀ ಗುರುಹೊಳೆ ಹುಚ್ಚೇಶ್ವರ ನಾಟ್ಯ ಸಂಘದಿಂದ ಪ್ರಸ್ತುತ ಪಡಿಸುವ "ಗಂಡನಿಗೆ ತಕ್ಕ ಹೆಂಡತಿ" ನಾಟಕ ಪ್ರದರ್ಶನ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಇವತ್ತು ಮನೆಯಲ್ಲಿ ಟಿವಿ ಅಥವಾ ಒಂದು ಮೊಬೈಲ್ ಇದ್ದರೆ ಸಾಕು ಮನರಂಜನೆ ಸಿಗುತ್ತದೆ. ಆದರೂ ದಾವಣಗೆರೆಯ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ರಂಗಭೂಮಿ ಕಲೆಯನ್ನು ಉಳಿಸಿ ಬೆಳೆಸುವ ಕಾರ್ಯ ದೊಡ್ಡದು. ರಂಗಕಲೆ ಉಳಿಯಬೇಕೆಂದರೆ ಕಲಾವಿದರು ಉಳಿಯಬೇಕು. ಕಲಾವಿದರಿಗೆ ಅಭಿಮಾನಿಗಳು ಪ್ರೋತ್ಸಾಹ ನೀಡಬೇಕು ಎಂದ ಅವರು, ದಾವಣಗೆರೆಯಲ್ಲಿ ಒಂದು ರಂಗಭೂಮಿ ಕಲೆ ಪ್ರದರ್ಶನಕ್ಕಾಗಿ ಒಂದು ರಂಗಮಂದಿರ ನಿರ್ಮಾಣ ಮಾಡಬೇಕು. ಆ ಕಾರ್ಯವನ್ನು ನಮ್ಮ ಹೊಸ ಶಾಸಕರು ರಾಜ್ಯ ಸರಕಾರದ ಮೇಲೆ ಒತ್ತಡ ಹಾಕಿ ವಿಶೇಷ ಅನುದಾನ ತಂದು ಈ ಕಾರ್ಯವನ್ನು ಮಾಡಲಿ ಎಂದು ಆಶಿಸಿದರು.

ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ ಕೆ.ಶೆಟ್ಟಿ ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ಕಲಾವಿದರು ಬದುಕಬೇಕು, ಕಲೆಯೂ ಉಳಿಯಬೇಕು. ಇವತ್ತು ರಂಗಭೂಮಿ ಕಲೆ ಸಮಸ್ಯೆಗಳ (3ನೇ ಪುಟಕ್ಕೆ)

## ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡುವಲ್ಲಿ ಬ್ಯಾಂಕುಗಳು ಆದ್ಯತೆ ನೀಡಬೇಕು: ಡಾ॥ ಪ್ರಭಾ




ದಾವಣಗೆರೆ,ಜೂ.19: ಶೈಕ್ಷಣಿಕ ಸಾಲ ವಿತರಣೆಯಲ್ಲಿ ಬ್ಯಾಂಕ್ ಗಳು ಆದ್ಯತೆ ಮೇಲೆ ವಿದ್ಯಾರ್ಥಿಗಳಿಗೆ ಸಾಲ ನೀಡಬೇಕು, ಹಾಗೂ ಸಿಎಸ್‌ಆರ್ ಯೋಜನೆಯಡಿ ಬ್ಯಾಂಕ್ ಗಳು ಬೇರೆ ಉದ್ದೇಶಕ್ಕೆ ಬಳಸದೆ ಶಾಲೆಗಳ ಅಭಿವೃದ್ಧಿಗೆ ನೀಡುವಂತೆ ದಾವಣಗೆರೆ ಲೋಕಸಭಾ ಸದಸ್ಯೆ ಡಾ.ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಬ್ಯಾಂಕರ್ಸ್ ಜಿಲ್ಲಾ ಸಲಹೆಗಾರರ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಪರಿಶೀಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶೈಕ್ಷಣಿಕ ಸಾಲ ವಿತರಣೆಯಲ್ಲಿ ಬ್ಯಾಂಕ್ ಗಳ ಗಣನೀಯ ಪ್ರಗತಿ ಕಂಡುಬಂದಿದೆ. ಜಿಲ್ಲೆಯಲ್ಲಿ ಈ ವರ್ಷ ಒಟ್ಟು 1533 ಶೈಕ್ಷಣಿಕ ಸಾಲಗಳನ್ನು ಮಂಜೂರು ಮಾಡಲಾಗಿದ್ದು, ಒಟ್ಟು 62.55 ಕೋಟಿ ರೂ. ಸಾಲ ನೀಡಲಾಗಿದೆ. ಪೋಷಕರು ಈ ಹಿಂದೆ ಸಾಲ ಪಡೆದು ಬಾಕಿ ಉಳಿಸಿಕೊಂಡಿದ್ದಾರೆ ಅಥವಾ ಡಿಫಾಲ್ಟರ್ ಆಗಿದ್ದಾರೆ ಎಂಬ ಕಾರಣಕ್ಕೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲವನ್ನು ನಿರಾಕರಿಸುವಂತಿಲ್ಲ ಎಂದು ಬ್ಯಾಂಕರ್‌ಗಳಿಗೆ ಸೂಚಿಸಿದರು.

ದಾವಣಗೆರೆ ಜಿಲ್ಲೆಯಲ್ಲಿರುವ ಎಲ್ಲ ದ್ವಿತೀಯ ಪಿಯುಸಿ ಮತ್ತು ಪದವಿ ಕಾಲೇಜುಗಳ ಅಂಕಿ ಅಂಶ ಪಡೆದುಕೊಂಡು, ಬ್ಯಾಂಕುಗಳಿಗೆ ನಿರ್ದಿಷ್ಟ ಶಾಲೆಗಳನ್ನು ನಿಯೋಜಿಸಲಾಗುವುದು. ಬ್ಯಾಂಕ್ ಅಧಿಕಾರಿಗಳು ಆಯಾ ಶಾಲೆಗಳಿಗೆ ಭೇಟಿ ನೀಡಿ ಹಣಕಾಸು ಸಾಕ್ಷರತೆ ಮತ್ತು ಶೈಕ್ಷಣಿಕ ಸಾಲಗಳ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ತಿಳಿಸಿದರು.

ಲೀಡ್ ಬ್ಯಾಂಕ್ ಮ್ಯಾನೇಜರ್ ಹಿರೇಮಠ್ ಅವರು ಮಾತನಾಡಿ , ಶೈಕ್ಷಣಿಕ ಸಾಲ ವಿತರಣೆಗೆ ಸಂಬಂಧಿಸಿದಂತೆ (3ನೇ ಪುಟಕ್ಕೆ)

# ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ನಂ.403/4-ಎ, ಡಾ॥ ಮೋದಿ ಕಣ್ಣಿನ ಆಸ್ಪತ್ರೆ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002, ಫೋ:255974

## ಇದರ ದಿನಾಂಕ : 31-03-2026 ರಲ್ಲಿ ಇದ್ದಂತೆ, 2025-2026 ನೇ ಸಾಲಿನ ಲಾಭ ನಷ್ಟದ ತಃಖ್ತೆ.

| 31-03-2025 ರಲ್ಲಿ ಇದ್ದಂತೆ | ಕ್ರಮ ಸಂಖ್ಯೆ | ನಷ್ಟದ ವಿವರ | 31-03-2026 ರಲ್ಲಿ ಇದ್ದಂತೆ | 31-03-2025 ರಲ್ಲಿ ಇದ್ದಂತೆ | ಕ್ರಮ ಸಂಖ್ಯೆ | ಲಾಭದ ವಿವರಗಳು | 31-03-2026 ರಲ್ಲಿ ಇದ್ದಂತೆ |
|---|---|---|---|---|---|---|---|
| 1,36,18,700.00 | 1 | ಬಡ್ಡಿ ಕೊಟ್ಟಿದ್ದು | 81,29,883.00 | 1,23,81,804.00 | 1 | ಬಡ್ಡಿ ಬಂದಿದ್ದು | 1,06,47,055.00 |
| 25,79,079.00 | 2 | ಸಿಬ್ಬಂದಿ ಸಂಬಳ | 28,37,166.00 | 66,76,086.01 | 2 | ವಿನಿಯೋಗದ ಮೇಲಿನ ಬಡ್ಡಿ | 30,16,971.70 |
| 27,24,742.01 | 3 | ಆಡಳಿತ ವೆಚ್ಚ | 22,86,056.70 | 5,01,631.00 | 3 | ಇತರೆ ಆದಾಯಗಳು | 2,00,356.00 |
| 6,37,000.00 | 4 | ನಿವ್ವಳ ಲಾಭ | 6,11,277.00 | | | | |
| 1,95,59,521.01 | | ಒಟ್ಟು ಜುಮ್ಲಾ ರೂ. | 1,38,64,382.70 | 1,95,59,521.01 | | ಒಟ್ಟು ಜುಮ್ಲಾ ರೂ. | 1,38,64,382.70 |

## ಆಸ್ತಿ-ಜವಾಬ್ದಾರಿ ತಃಖ್ತೆ ದಿನಾಂಕ : 31-03-2026 ರಲ್ಲಿ ಇದ್ದಂತೆ

| ಕ್ರಮ ಸಂಖ್ಯೆ | ಬಂಡವಾಳ ಮತ್ತು ಜವಾಬ್ದಾರಿಗಳು | | 31-03-2026 ರಲ್ಲಿ ಇದ್ದಂತೆ ರೂ. |
|---|---|---|---|
| 1. | **ಪಾವತಿಯಾದ ಪಾಲು ಬಂಡವಾಳ** | | 80,74,600.00 |
| | 1) ಬಿಡಿ ಸದಸ್ಯರಿಂದ | 80,74,600.00 | |
| 2. | **ಇತರೆ ನಿಧಿಗಳು** | | 1,65,26,151.00 |
| | 1) ಆಪದ್ಧನ ನಿಧಿ | 96,48,498.00 | |
| | 1) ಕಟ್ಟಡ ನಿಧಿ | 45,60,015.00 | |
| | 2) ಸಂಶಯಾಸ್ಪದ ಸಾಲದ ನಿಧಿ | 7,68,107.00 | |
| | 3) ಪ್ರಸಕ್ತ ಸಾಲಿನ ಸಂಶಯಾಸ್ಪದ ಸಾಲದ ನಿಧಿ | 5,14,954.00 | |
| | 4) ಸಿಬ್ಬಂದಿ ಕ್ಷೇಮ ನಿಧಿ | 6,25,531.00 | |
| | 5) ಸುವರ್ಣ ಮಹೋತ್ಸವದ ನಿಧಿ | 27,046.00 | |
| | 6) ಉತ್ತಮ ಆಸ್ತಿಯ ಅನಿಶ್ಚಿತ ನಿಬಂಧನೆ | 3,82,000.00 | |
| 3. | **ಠೇವಣಾತಿಗಳು :** | | 10,13,45,251.36 |
| | 1) ಉಳಿತಾಯ ಠೇವಣೆ | 2,68,03,531.50 | |
| | 2) ಚಾಲ್ತಿ ಖಾತೆ | 18,48,532.86 | |
| | 3) ಖಾಯಂ ಠೇವಣೆ | 2,13,20,253.00 | |
| | 4) ಭಾಗ್ಯನಿಧಿ ಠೇವಣೆ (ಪಿಗ್ಮಿ) | 38,48,615.00 | |
| | 5) ಶ್ರೀನಿಧಿ ರಿ ಇನ್‌ವೆಸ್ಟ್‌ಮೆಂಟ್ | 4,45,27,641.00 | |
| | ಡಿಪಾಜಿಟ್ | 29,25,557.00 | |
| | 6) ಶ್ರೀನಿಧಿ ರಿಕರಿಂಗ್ ಡಿಪಾಜಿಟ್ | 71,121.00 | |
| | 7) ಭಾಗ್ಯನಿಧಿ ಏಜೆಂಟ್ಸ್ ಭದ್ರತಾ ಠೇವಣೆ | | |
| 4. | | | 1,38,765.00 |
| | **ಅವಕಾಶಗಳು :** | 1,00,000.00 | |
| | ಆಡಿಟ್ ಫೀ ಕೊಡಬೇಕಾದ್ದು | 38,765.00 | |
| | ಠೇವಣೆಗಳ ಮೇಲೆ ಕೊಡಬೇಕಾದ ಬಡ್ಡಿ | | |
| 5. | | | 4,38,801.52 |
| | **ಇತರೆ ಕೊಡತಕ್ಕಗಳು** | 1,05,937.00 | |
| | ಸದಸ್ಯರ ಷೇರು ಡಿವಿಡೆಂಡ್ | - | |
| | SG S T(output) | - | |
| | CG S T (output) | 9,755.00 | |
| | TDS ಆದಾಯ ತೆರಿಗೆ ಕೊಡಬೇಕಾದ್ದು | 3,23,109.52 | |
| | DEAF A/C | | |
| 6. | | | 2,68,286.00 |
| | **ಬ್ಯಾಂಕಿಂಗ್ ವ್ಯವಹಾರದ ಜವಾಬ್ದಾರಿಗಳು :** | 2,68,286.00 | |
| | ಸಾಲಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರ) | | |
| | | 6,11,277.00 | 6,11,277.00 |
| | ನಿವ್ವಳ ಲಾಭ (2025-2026) | | |
| | ಒಟ್ಟು ಜುಮ್ಲಾ ರೂ | | 12,74,03,131.88 |

| ಕ್ರಮ ಸಂಖ್ಯೆ | ಆಸ್ತಿ ಮತ್ತು ಮೊಬಲಗು | | 31-03-2026 ರಲ್ಲಿ ಇದ್ದಂತೆ ರೂ. |
|---|---|---|---|
| 1) | **ನಗದು ಶಿಲ್ಕು** | | 22,88,786.00 |
| 2) | **ಬ್ಯಾಂಕುಗಳಲ್ಲಿ ಶಿಲ್ಕು** | | 1,10,66,144.79 |
| | 1) ದಾವಣಗೆರೆಜಿಲ್ಲಾ ಸ.ಬ್ಯಾಂಕ್ ಚಾಲ್ತಿ ಖಾತೆ | 1,97,030.79 | |
| | 2) ಎಸ್.ಬಿ. ಐ. ಚಾಲ್ತಿ ಖಾತೆ | 6,13,813.88 | |
| | 3) ಆಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆ | 43,61,015.50 | |
| | 4) ಐ.ಡಿ.ಬಿ.ಐ. ಬ್ಯಾಂಕ್ ಚಾಲ್ತಿ ಖಾತೆ | 48,15,797.44 | |
| | 5) ಆಕ್ಸಿಸ್ ಬ್ಯಾಂಕ್ CTS ಚಾಲ್ತಿ ಖಾತೆ | 10,78,487.18 | |
| 3) | **ವಿನಿಯೋಗಗಳು :** | | 4,16,24,069.00 |
| | 1) ಜಿಲ್ಲಾ ಸ.ಕೇಂದ್ರ ಬ್ಯಾಂಕ್ ಆಪದ್ಧನ ನಿಧಿ | 66,17,669.00 | |
| | 2) ಜಿಲ್ಲಾ ಸ. ಕೇಂದ್ರ ಬ್ಯಾಂಕ್ ಷೇರು | 30,000.00 | |
| | 4) ವಿದ್ಯಾಭಿವೃದ್ಧಿ ಸ.ಸಂ. ಷೇರು | 100.00 | |
| | 5) ಸರ್ಕಾರಿ ಸಾಲ ಪತ್ರಗಳು | 3,49,76,300.00 | |
| 4) | **ಸಾಲ ಮತ್ತು ಮುಂಗಡಗಳು :** | | 7,10,39,113.00 |
| | ಕಂತಿನ ಸಾಲ | 1,51,583.00 | |
| | ವಾಹನ ಸಾಲ | 40,17,745.00 | |
| | ಬಿಲ್ಡಿಂಗ್ ಸಾಲ | 6,61,73,248.00 | |
| | ಠೇವಣೆಗಳ ಮೇಲಿನ ಸಾಲ | 6,96,537.00 | |
| 5) | **ಪೀಠೋಪಕರಣ ಮತ್ತು ಜೋಡಣೆಗಳು :** | | |
| | ಇತರೆ ಆಸ್ತಿ ಗಳು : | | |
| | ಪೀಠೋಪಕರಣಗಳು | 4,55,900.00 | 8,59,333.09 |
| | IG S T (input) | 14,262.57 | |
| | CG S T (input) | 48,307.00 | |
| | SG S T (input) | 17,754.00 | |
| | DEAF A/C | 3,23,109.52 | |
| 6) | **ಬ್ಯಾಂಕಿಂಗ್ ವ್ಯ ಜವಾಬ್ದಾರಿಗಳು (ಕಾಂಟ್ರ)** | | |
| | ಸಾಲಗಳ ಮೇಲೆ ಬರಬೇಕಾದ ಬಡ್ಡಿ (ಕಾಂಟ್ರ) | 2,68,286.00 | 2,68,286.00 |
| 7) | **ಮುಂಗಡಗಳು :** | | 2,57,400.00 |
| | ಕಛೇರಿ ಬಾಡಿಗೆ ಮುಂಗಡ | 2,10,000.00 | |
| | ದೂರವಾಣಿ ಮುಂಗಡ | 2,400.00 | |
| | ಸಿಬ್ಬಂದಿ ಹಬ್ಬದ ಮುಂಗಡ | 45,000.00 | |
| | ಒಟ್ಟು ಜುಮ್ಲಾ ರೂ | | 12,74,03,131.88 |

| ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- | ಸಹಿ/- |
|---|---|---|---|---|---|---|
| **ಕೆ.ಎಸ್. ಮಹೇಶ್ವರಪ್ಪ** | **ಬಿ.ಹೆಚ್. ಪರಶುರಾಮಪ್ಪ,** | **ಶ್ರೀಮತಿ ಪಂಕಜ ವೀರಯ್ಯ** | **ರವೀಂದ್ರನಾಥ್ ಕೆ ಆರ್.** | **ಅಭಿಷೇಕ್ ಬಿ.ಜೆ.** | **ಶ್ರೀಮತಿ ಲತಾ ಹಾಲೇಶ್** | **ಶ್ರೀಮತಿ ಗೀತಾರಾಣಿ ಐಕೆ** |
| ಅಧ್ಯಕ್ಷರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ನಿರ್ದೇಶಕರು | ವ್ಯವಸ್ಥಾಪಕರು |

### ಲೆಕ್ಕ ಪರಿಶೋಧನಾ ದೃಢೀಕರಣ

ಸಿಟಿ ಕೋ ಆಪರೇಟಿವ್ ಬ್ಯಾಂಕ್ ಲಿ.., ದಾವಣಗೆರೆ, ಇದರ 2025-2026 ನೇ ಸಾಲಿನ ಲೆಕ್ಕ ಪತ್ರಗಳನ್ನು ನಾವು ಪರಿಶೀಲಿಸಿರುತ್ತೇವೆ. ಲೆಕ್ಕ ಪರಿಶೋಧನೆಗೆ ಅಗತ್ಯವಿದ್ದ ಮಾಹಿತಿಗಳನ್ನು ಮತ್ತು ಸಮಾಜಾಯಿಷಿಗಳನ್ನು ಪಡೆದಿರುತ್ತೇವೆ. ಅವುಗಳು ನಮ್ಮ ಅನುಭವ ಮತ್ತು ತಿಳುವಳಿಕೆ ಮಟ್ಟಿಗೆ ತೃಪ್ತಿಕರವಾಗಿರುತ್ತವೆ. ನಮಗೆ ವಹಿಸಿದ ಮಾಹಿತಿಗಳ ಆಧಾರದ ಮೇರೆಗೆ ದಿನಾಂಕ: 31/03/2026 ರಲ್ಲಿ ಇದ್ದಂತೆ ಲಾಭ-ನಷ್ಟ ತ:ಖ್ತೆ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಯ ಲೆಕ್ಕ ಪರಿಶೋಧನಾ ವರದಿಯ ಅನ್ವಯ ಈ ಬ್ಯಾಂಕಿನ ನೈಜ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಈ ಮೂಲಕ ದೃಢೀಕರಿಸುತ್ತೇವೆ.

ಸ್ಥಳ : ದಾವಣಗೆರೆ
ದಿನಾಂಕ : : 19-05-2026

**ವಿ.ಪಿ.ಜಿ.ಪಿ. & ಕಂಪನಿ**, ಸನ್ನದು ಲೆಕ್ಕಪರಿಶೋಧಕರು, ಎಫ್.ಆರ್.ಎನ್ 017661
ಸಹಿ/-
**ವಿರೂಪಾಕ್ಷ ಹಿಪ್ಪರಗಿ**, ಸದಸ್ಯತ್ವ ಸಂಖ್ಯೆ 236738 ಪಾಲುದಾರರು,, ಹುಬ್ಬಳ್ಳಿ
UDIN: 26236738BMLMSJ5469

# Disclosure in financial statements – 'Notes to Accounts'-UCBs

a) Composition of Regulatory Capital CRAR

*(Amount in ₹ crore)*

| Sr. No. | Particulars | Current Year 31/3/ 26 | Previous Year 31/3/25 |
|---|---|---|---|
| i) | Paid up share capital and reserves (net of deductions, if any) | 2.30 | 2.36 |
| ii) | Other Tier 1 capital | | |
| iii) | Tier 1 capital (i + ii) | 2.30 | 2.36 |
| iv) | Tier 2 capital | 0.047 | 0.028 |
| v) | Total capital (Tier 1+Tier 2) | 2.347 | 2.388 |
| vi) | Total Risk Weighted Assets (RWAs) | 5.966 | 8.473 |
| vii) | Paid-up share capital and reserves as percentage of RWAs | 39.34% | 28.18% |
| viii) | Tier 1 Ratio (Tier 1 capital as a percentage of RWAs) | 38.55 | 27.85 |
| ix) | Tier 2 Ratio (Tier 2 capital as a percentage of RWAs) | 0.79 | 0.33 |
| x) | Capital to Risk Weighted Assets Ratio (CRAR) (Total Capital as a percentage of RWAs) | 39.34% | 28.18% |
| | Amount of Tier 2 capital raised during the year of which: | ---- | ---- |
| a) | a) Perpetual Cumulative PreferenceShares<br>b) Redeemable Non-Cumulative PreferenceShares<br>c) ….. | ---- | ---- |

b) Draw down from Reserves
Suitable disclosures mentioning the amount and the rationale for withdrawal shall be made regarding any draw down from reserves.

**2. Asset liability management**

**a) Maturity pattern of certain items of assets and liabilities 31/3/2026**

*(Amount in ₹ crore)*

| | Day 1 | 2 to 7 days | 8 to 14 days | 15 to 30 Days | 31 days to 2 months | Over 2 months and to 3 months | Over 3 months and up to 6 Months | Over 6 months and up to 1 year | Over 1 year and upto 3 years | Over 3 years andup to 5 years | Over 5 years | Total |
|---|---|---|---|---|---|---|---|---|---|---|---|---|
| Deposits | 0 | 0 | 0.10 | 0.25 | 0.54 | 0.75 | 0.83 | 1.68 | 2.70 | 2.48 | 0.80 | 10.13 |
| Advances | 0 | 0 | 0.03 | 0.05 | 0.10 | 0.24 | 0.18 | 1.58 | 1.45 | 1.22 | 2.25 | 7.10 |
| Investments | 0 | 0 | 0 | 0 | 0 | - | - | 0 | 0.67 | 3.49 | 0 | 4.16 |
| Borrowings | 0 | 0 | 0 | 0 | 0 | 0 | 0 | 0 | 0 | 0 | 0 | 0 |

3. Investments
a) Composition of Investment Portfolio
As on 31/03/2026(current year balance sheet date)

*(Amount in ₹ crore)*

| | Investments in India | | | | | | | Investments outside India | | | | |
|---|---|---|---|---|---|---|---|---|---|---|---|---|
| | Govern-ment Securities | Other Approved Securities | Shares | Deben-tures and Bonds | Subsidiaries and/or joint ventures | Others | Total in-vestments in India | Government securities (including local authorities) | Subsidiaries and/or joint ventures | Others | Total Investments outside India | Total Invest-ments |
| Held to Maturity | | | | | | | | | | | | |
| Gross | 3.49 | | | | | 0.67 | 4.16 | | | | | 4.16 |
| Less: Provision for non- performing investments (NPI) | | | | | | | | | | | | |
| Net | 3.49 | | | | | 0.67 | 4.16 | | | | | 4.16 |

b) Non-SLR investmentportfolio
i) Non-performing non-SLRinvestments

*(Amount in ₹ crore)*

| Sr. No. | Particulars | Current Year 31/03/2026 | Previous Year 31/03/2025 |
|---|---|---|---|
| a) | Opening balance | 0.95 | 6.11 |
| b) | Additions during the year since 1st April | ---- | ------ |
| c) | Reductions during the above period | 0.29 | 5.16 |
| d) | Closing balance | 0.66 | 0.95 |
| e) | Total provisions held | 0.00 | 0.00 |

ii) Issuer composition of non-SLRinvestments

*(Amount in ₹ crore)*

| Sr. No. | Issuer | Amount | | Extent of Private Placement | | Extent of 'Below Invest-ment Grade' Securities | | Extent of 'Unrated' Securities | | Extent of 'Unlisted' Securities | |
|---|---|---|---|---|---|---|---|---|---|---|---|
| (1) | (2) | (3) | | (4) | | (5) | | (6) | | (7) | |
| | | Current year | Previous Year | Current year | Previous Year | Current year | Previous Year | Current year | Previous Year | Current year | Previous Year |
| a) | PSUs | -- | -- | -- | -- | -- | -- | -- | -- | -- | -- |
| b) | FIs | -- | -- | -- | -- | -- | -- | -- | -- | -- | -- |
| c) | Banks | 0.66 | 0.95 | -- | -- | -- | -- | -- | -- | -- | -- |
| d) | Private Corporates | -- | -- | -- | -- | -- | -- | -- | -- | -- | -- |
| e) | Subsidiaries/ Joint Ventures | -- | -- | -- | -- | -- | -- | -- | -- | -- | -- |
| f) | Others | -- | -- | -- | -- | -- | -- | -- | -- | -- | -- |
| g) | Provision held towards depreciation | -- | -- -- | -- | -- -- | -- | -- -- | -- | -- -- | -- | -- -- |
| | Total | 0.66 | 0.95 | -- | -- | -- | -- | -- | -- | -- | -- |

1. *The total shall match the total of non-SLR investments held by thebank.
2. Amounts reported under columns 4, 5, 6 and 7 above may not be mutuallyexclusiv

3. Assetquality
a) Classification of advances and provisions held 31/03/2026

*(Amount in ₹ crore)*

| | Standard | Non-Performing | | | | Total |
|---|---|---|---|---|---|---|
| | Total Standard Advances | Sub-standard | Doubtful | Loss | Total NPA Advances | |
| **Gross Standard Advances and NPAs** | | | | | | |
| Opening Balance | 8.48 9.63 | 0.008 | 0.0845 | | | 0.0925 |
| Add: Additions during the year | 1.15 | 0.0319 | | | | 0.0319 |
| Less: Reductions during the year | - 2.53 | - | | | | |
| **Closing balance** | 9.63 7.10 | 0.0399 | 0.0844 | | | 0.1244 |
| *Reductions in Gross NPAs due to: | | | | | | |
| Upgradation | | | | | | |
| Recoveries (excluding recov eries from upgraded accounts) | | | | | | |
| Write-offs | | | | | | |
| | | | | | | |
| **Provisions (excluding Floating Provisions)** | | | | | | |
| Opening balance of provisions held | | 0.008 | 0.016 | | | 0.016 |
| Add: Fresh provisions made during the year | | 0.004 | 0.06 | | | 0.064 |
| Less: Excess provision reversed/ Write-off loans | | | | | | |
| Closing balance of provisions held | | | | | | 0.08 |
| | | | | | | |
| **Net NPAs** | | | | | | |
| Opening Balance | | 0.002 | 0.0471 | | | 0.0491 |
| Add: Fresh additions during the year | | 0.030 | 0.028 | | | 0.0058 |
| Less: Reductions during the year | | 0.0435 | | | | 0.0435 |
| **Closing Balance** | | 0.008 | 0.0751 | | | 0.0114 |

| Ratios (in %) | Current Year | Previous Year |
|---|---|---|
| Gross NPA to Gross Advances | 12.44 | 9.63 |
| Net NPA to Net Advances | 0.08 | 0.05 |
| Provision coverage ratio | - | - |

b) Sector-wise Advances and Gross NPAs ON 31/03/2026

*(Amount in ₹ crore)*

| Sr. No. | Sector* | Current Year | | | Previous Year | | |
|---|---|---|---|---|---|---|---|
| | | O/s Total Advances | Gross NPAs | % of Gross NPAs to Total Advs in that sector | Outstand-ing Total Advances | Gross NPAs | % of Gross NPAs to Total Advs in that sector |
| i) | Priority Sector | | | | | | |
| a) | Agriculture and allied activities | | | | | | |
| b) | Advances to industries sector eligible as priority sector lending | 0.09 | | | 0.12 | | |
| c) | Services | 6.72 | 0.10 | 0.83 | 7.49 | 0.08 | 0.83 |
| d) | Personal loans | 0.09 | 0.02 | 0.16 | 0.93 | 0.01 | 0.10 |
| | Sub total (i) | 6.90 | 0.12 | | 8.54 | 0.09 | |
| | | | | | | | |
| ii) | Non-priority Sector | | | | | | |
| a) | Agriculture and allied activities | | | | | | |
| b) | Industry | | | | | | |
| c) | Services | | | | | | |
| d) | Personal loans | 0.11 | 0.0044 | 0.01 | 0.53 | | - |
| | Sub-total (ii) | 0.11 | 0.0044 | | 0.53 | | |
| | Total (I+ii) | 7.01 | 0.1244 | | 9.07 | 0.09 | |

* As defined in section 3(7) of the Insolvency and Bankruptcy Code, 2016

b) Unsecuredadvances

*(Amount in ₹ crore)*

| Particulars | Current year | Previous Year |
|---|---|---|
| Total unsecured advances of the bank | 0.02 | 0.03 |

5. Concentration of deposits, advancesandNPAs
a) Concentration ofdeposits

(Amounts in ₹ crore)

| Particulars | Current Year | Previous Year |
|---|---|---|
| Total deposits of the twenty largest depositors | 2.71 | 0.80 |
| Percentage of deposits of twenty largest depositors to total deposits of the bank | 26.75% | 5.10% |

b) Concentration ofadvances*

(Amounts in ₹ crore)

| Particulars | Current Year | Previous Year |
|---|---|---|
| Total advances to the twenty largest borrowers | 6.87 | 8.54 |
| Percentage of advances to twenty largest borrowers to total advances of the bank | 96.71% | 88.68% |

*Advances shall be computed based on credit exposure i.e. funded and non-funded limits. The

c) Concentration ofNPAs

(Amount in ₹ crore)

| | Current Year | Previous Year |
|---|---|---|
| Total Exposure to the top twenty NPA accounts | 7 | 5 |
| Percentage of exposures to the twenty largest NPA exposure to total Gross NPAs. | 1.75% | 0.96% |

9.OtherDisclosures
a)Businessratios

(Amount in ₹ crore)

| Particular | Current Year | Previous Year |
|---|---|---|
| i) Interest Income as a percentage to WorkingFunds28 | 10.79 | 10.32 |
| ii) Non-interest income as a percentage to WorkingFunds28 | 0.16 | 0.39 |
| iii) Cost ofDeposits | 12.40 | 8.69 |
| iv) Net Interest Margin29 | 10.46 | 12.89 |
| v) Operating Profit as a percentage to WorkingFunds28 | 0.48 | 0.35 |
| vi) Return onAssets30 | 1.01 | 1.17 |

28 Working funds to be reckoned as average of total assets (excluding accumulated losses, if any) as reported to Reserve Bank of India in Form IX , during the 12 months of the financial year.
29 Net Interest Income/ Average Earning Assets. Net Interest Income= Interest Income – Interest Expense
30 Return on Assets would be with reference to average working funds (i.e., total of assets excluding accumulated losses, if any).

| Particular | Current Year | Previous Year |
|---|---|---|
| vii) Business (deposits plus advances) per employee31 (in₹ crore) | 0.02 | 0.01 |
| viii) Profit per employee (in ₹crore) | 0.08 | 0.08 |

b) Bank assurance business
The details of fees / brokerage earned in respect of insurance broking,agency andbancassurancebusinessundertakenbythem-shallbedisclosedforboththe current year and previous year.
c) Disclosures regarding Priority Sector Lending Certificates(PSLCs)
The amount of PSLCs (category-wise) sold and purchased during the year shall be disclosed. –No-

d) Payment of DICGC InsurancePremium

(Amount in ₹ crore)

| Sr. No. | Particulars | Current Year | Previous Year |
|---|---|---|---|
| i) | Payment of DICGC Insurance Premium | 0.173 | 0.028 |
| ii) | Arrears in payment of DICGC premium | 0.00 | 0.00 |

31 For the purpose of computation of business per employee (deposits plus advances), inter-bank deposits shall be excluded.
e) Disclosure of facilities granted to directors and theirrelatives
UCBs shall disclose any fund or non-fund (guarantees, letters of credit, etc.) facilities extended to directors, their relatives, companies or firms in which they are interested.

## ಪರಿಷತ್ ಚುನಾವಣೆಯಲ್ಲಿ ರಾಜ್ಯ ...

(1ನೇ ಪುಟದಿಂದ) ಪ್ರಸ್ತುತ ರಾಜಕೀಯ ಬೆಳವಣಿಗೆಗಳನ್ನು, ವಿಧಾನ ಪರಿಷತ್ತಿನಲ್ಲಿ ನಡೆದ ಅಡ್ಡ ಮತದಾನದ ಬಗ್ಗೆ ವಿವರಿಸಲು ನಾನು ಸಮಯ ಕೋರಿದ್ದೇನೆ. ಹೆಚ್ಚಾಗಿ ಇಂದು ಅಥವಾ ಸೋಮವಾರ ಅವರು ಸಮಯ ನೀಡುತ್ತಾರೆ. ನಾನು ಅವರನ್ನು ಭೇಟಿಯಾಗುತ್ತೇನೆ, ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿಯಾಗುತ್ತೇನೆ ಮತ್ತು ಸಂಪೂರ್ಣ ವಿವರಣೆ ನೀಡುತ್ತೇನೆ" ಎಂದು ವಿಜಯೇಂದ್ರ ತಿಳಿಸಿದರು.

ಒಟ್ಟಿನಲ್ಲಿ ಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನ ದೋಸ್ತಿ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್‌ನಲ್ಲಿ ಮಹತ್ವ ರಾಜಕೀಯ ಬೆಳವಣಿಗೆಗಳು ನಡೆಯುತ್ತಿದ್ದು, ಅಂತಿಮವಾಗಿ ಅಡ್ಡಮತದಾನ ಮಾಡಿದವರನ್ನು ಪತ್ತೆ ಮಾಡಿ ಯಾವ ಕ್ರಮಕೈಗೊಳ್ಳುತ್ತಾರೋ ಅಥವಾ ರಾಜ್ಯ ನಾಯಕರ ತಲೆದಂಡವಾಗುತ್ತೆ ಎಂಬುದು ಕಾದುನೋಡಬೇಕಿದೆ.

**ಕಥೆ-ಕವನ, ಚುಟುಕು, ಮಕ್ಕಳು ಬಿಡಿಸಿದ ಚಿತ್ರಗಳನ್ನು ಪ್ರಕಟಿಸುವ ವಿಭಾಗ**
**9740137083**

### ದಿನಕ್ಕೊಂದು ಚುಟುಕು

ಕೈಗೆಟಕುವುದ ಪಡೆಯಬಹುದು
ಆಗದುದಕೆ ಅತ್ತರೇನು ಫಲ??!
ಸುವಿಚಾರವ ಹೇಳಲೂಬಹುದು
ಕಡೆಗಣಿಸುವವರ ಕರೆದರೇನು ಫಲ?!

– ಡಾ. ಮಮು

### ದಿನಕ್ಕೊಂದು ನುಡಿ ಮುತ್ತು

ಅವಶ್ಯಕತೆಗಳಿಗಷ್ಟೆ
ಬೆಲೆ ಜಗದಲ್ಲಿ,
ಅದನ್ನು ಮೀರಿದ
ಬಂಧವೆಲ್ಲಿ?
ಹುಡುಕಿದರೂ ಸಿಗದು.
ನಾ ನಿನಗಾದರೆ,ನೀ ನನಗೆ.
ಜೀವನವಿಲ್ಲಿ ಅವಲಂಬನೆ..
ಅವಶ್ಯಕತೆಗಳಿಗನುಸಾರವಾಗಿ!

– ಮಂಜುಳಾ ಪ್ರಸಾದ್ ದಾವಣಗೆರೆ

ನಗರವಾಣಿ ದಾವಣಗೆರೆ
ಜೂನ್ 20, 2026
ಶನಿವಾರ,
ಪುಟ–3
ಪತ್ರಿಕೆಗಳಿಗೆ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
08192–254186

# ವಿದ್ಯುತ್ ಕಂಪನಿಗಳ ಖಾಸಗೀಕರಣ ವಿರೋಧಿಸಿ ಜೂ.22 ಕ್ಕೆ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ

ದಾವಣಗೆರೆ: ಗ್ರಾಹಕರು ಮತ್ತು ರೈತರ ಹಿತಾಸಕ್ತಿಗೆ ಧಕ್ಕೆ ತರುತ್ತಿರುವ ವಿದ್ಯುತ್ ಕಂಪನಿಗಳ ಖಾಸಗೀಕರಣ ನೀತಿಯನ್ನು ವಿರೋಧಿಸಿ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘ ಸಮಿತಿಯು ಜೂನ್ 22 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಪ್ರತಿಭಟನಾ ಸಭೆಯನ್ನು ಹಮ್ಮಿಕೊಂಡಿದೆ.

ರಾಜ್ಯದ ಜನತೆ ಅತ್ಯಂತ ಕಷ್ಟಪಟ್ಟು ಕಟ್ಟಿ ಬೆಳೆಸಿದ ಹಾಗೂ ಲಾಭದಾಯಕವಾಗಿ ನಡೆಯುತ್ತಿರುವ ಇಂಧನ ಇಲಾಖೆಯ ಕಂಪನಿಗಳನ್ನು ಹೊರರಾಜ್ಯದ ಟಾಟಾ ಪವರ್ ಲಿಮಿಟೆಡ್ ಎಂಬ ದೈತ್ಯ ಖಾಸಗಿ ಸಂಸ್ಥೆಗೆ ವಹಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿರುವುದನ್ನು ಸಂಘಟನೆಯು ತೀವ್ರವಾಗಿ ಖಂಡಿಸಿದೆ.

ಖಾಸಗೀಕರಣದ ನಿರ್ಧಾರದಿಂದ ಇಲಾಖೆಯ ಮೇಲೆ ಅವಲಂಬಿತವಾಗಿರುವ ಕೋಟ್ಯಂತರ ಕುಟುಂಬಗಳಿಗೆ ಭಾರಿ ನಷ್ಟ ಉಂಟಾಗಲಿದೆ. ಸದ್ಯ ಈ ಉದ್ಯೋಗವನ್ನು ನಂಬಿರುವ ಸುಮಾರು 60 ಸಾವಿರ ನೌಕರರು ಹಾಗೂ ಅವರನ್ನೇ ಆಶ್ರಯಿಸಿರುವ 4 ಲಕ್ಷಕ್ಕೂ ಅಧಿಕ ಕುಟುಂಬಗಳು, 40 ಸಾವಿರ ವಿದ್ಯುತ್ ಗುತ್ತಿಗೆದಾರರು, ಲೈನ್ ಮೆನ್ ಗಳು, ವಿದ್ಯುತ್ ಕೆಲಸಗಾರರು ಮತ್ತು ಅವರ ಕುಟುಂಬದ 5 ಲಕ್ಷಕ್ಕೂ ಹೆಚ್ಚು ಜನರು ಬೀದಿಗೆ ಬೀಳುವ ಭೀತಿ ಎದುರಾಗಿದೆ. ಸರ್ಕಾರದ ಈ ದ್ವಂದ್ವ ನೀತಿಯು ಸಾರ್ವಜನಿಕರ ಹಿತಾಸಕ್ತಿಗೆ ವಿರುದ್ಧವಾಗಿದ್ದು, ಬಡವರ ಕಲ್ಯಾಣಕ್ಕಾಗಿ ಜಾರಿಗೆ ತಂದಿರುವ ಭಾಗ್ಯಜ್ಯೋತಿ, ಕುಟೀರಜ್ಯೋತಿಯಂತಹ ಜನಪರ ಯೋಜನೆಗಳಿಗೂ ಇದ–ರಿಂದ ಹಿನ್ನಡೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಲಾಗಿದೆ.

ಈ ಮಾರಕ ಖಾಸಗೀಕರಣ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ತೊಲಗಿಸುವ ಉದ್ದೇಶದಿಂದ, ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯ ಮಟ್ಟದ ಪ್ರತಿಭಟನಾ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸಮಿಯ ರಾಜ್ಯ ಅಧ್ಯಕ್ಷ ಸಿ. ರಮೇಶ್ ಅವರ ನೇತೃತ್ವದಲ್ಲಿ ಪ್ರತಿಭಟನಾ ಸಭೆ ನಡೆಯಲಿದೆ ಎಂದು ತಿಳಿದಲಾಗಿದೆ.

ಜಿಲ್ಲಾ ಸಮಿತಿಯ ಪದಾಧಿಕಾರಿಗಳಾದ ಜಿಲ್ಲಾ ಅಧ್ಯಕ್ಷ ಕೆ.ವಿ. ರವಿ, ಜಿಲ್ಲಾ ಕಾರ್ಯದರ್ಶಿ ಕೆ.ಆರ್. ವಿರೂಪಾಕ್ಷಪ್ಪ ಸೇರಿದಂತೆ ಇತರರು ಇಲಾಖೆಯ ಸಮಸ್ತ ನೌಕರರು, ಸಾರ್ವಜನಿಕರು, ರೈತರು ಮತ್ತು ಕನ್ನಡ ಸಂಘಟನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಲೆಬನಾನ್ ಅನ್ನು ಸುಟ್ಟು ಬೂದಿ...

(1ನೇ ಪುಟದಿಂದ)


ಈ ಹೊಸ ದಾಳಿಗಳ ಬಗ್ಗೆ ತೀಕ್ಷ್ಣವಾಗಿಯೇ ಪ್ರತಿಕ್ರಿಯಿಸಿರುವ ಇಸ್ರೇಲ್ ರಾಷ್ಟ್ರೀಯ ಭದ್ರತಾ ಸಚಿವ ಇಟಮರ್ ಬೆನ್ ಗ್ವಿರ್ ಅವರು, "ಇಡೀ ಲೆಬನಾನ್ ಸುಟ್ಟು ಬೂದಿ ಮಾಡಬೇಕು" ಎಂದು ಹೇಳಿದ್ದಾರೆ.

"ಇಸ್ರೇಲಿ ತಾಯಿಯ ಪ್ರತಿ ಕಣ್ಣೀರಿಗೆ, ಸಾವಿರ ಲೆಬನಾನ್ ತಾಯಂದಿರು ಅಳಬೇಕು. ಇಡೀ ಲೆಬನಾನ್ ಸುಡಬೇಕು! ಅಮೆರಿಕನ್ನರಿಗೆ ಎಲ್ಲಾ ಗೌರವಗಳೊಂದಿಗೆ, ನಮ್ಮ ಪುತ್ರರ ರಕ್ತ ಮತ್ತು ನಮ್ಮ ನಾಗರಿಕರ ಭದ್ರತೆಯನ್ನು ಕಳೆದುಕೊಳ್ಳುವುದಿಲ್ಲ ಎಂದು ಇಸ್ರೇಲ್ ಇಡೀ ಜಗತ್ತಿಗೆ ಸ್ಪಷ್ಟಪಡಿಸಬೇಕು. ಇಡೀ ಲೆಬನಾನ್ ಅನ್ನು ಸುಟ್ಟು ಬೂದಿ ಮಾಡಬೇಕು. ಇಸ್ರೇಲ್ ನಾಗರಿಕರು ಮತ್ತು ಐಡಿಎಫ್ ಸೈನಿಕರನ್ನು ರಕ್ಷಿಸುವುದು ನಮ್ಮ ಅತ್ಯುನ್ನತ ಕರ್ತವ್ಯವಾಗಿದೆ ಮತ್ತು ಈ ಬದ್ಧತೆಯು ಇತರ ಎಲ್ಲ ಪರಿಗಣನೆಗಳಿಗಿಂತ ಹೆಚ್ಚು ಆದ್ಯತೆ–ಯಾಗಿದೆ" ಎಂದು ಗ್ವಿರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

## "ಯೋಗ ಮತ್ತು ಆರೋಗ್ಯ"

- ಶ್ರೀಮತಿ ಲಾವಣ್ಯ ಎಸ್. ಪಿ.

### ಭೂ ನಮನಾಸನ: (ಭೂಮಿಗೆ ನಮಸ್ಕರಿಸುವ ಭಂಗಿ)



"ಸೊಂಟದ ಸುತ್ತಲಿನ ಹೆಚ್ಚುವರಿ ಕೊಬ್ಬನ್ನು ಕರಗಿಸಲು ಮತ್ತು ಪೃಷ್ಠದ ಸ್ನಾಯುಗಳನ್ನು ಬಲಪಡಿಸಲು ಉತ್ತಮವಾದ ಆಸನವಾಗಿದೆ"

ಅರ್ಥ: ಸಾಂಪ್ರದಾಯಿಕ ಹಠ ಯೋಗದಲ್ಲಿ "ಭೂಮಿ ತಾಯಿಗೆ ನಮಸ್ಕರಿಸುವ ಭಂಗಿ" ಎಂದರ್ಥ. ಸಂಸ್ಕೃತದಲ್ಲಿ 'ಭೂ' ಎಂದರೆ ಭೂಮಿ, ನಮನ'ಎಂದರೆ ಗೌರವ ಪೂರ್ವಕವಾಗಿ ಬಾಗುವುದು ಅಥವಾ ನಮಸ್ಕಾರ ಮಾಡುವುದು.

ಮಾಡುವ ವಿಧಾನ: * ಕಾಲುಗಳನ್ನು ನೇರವಾಗಿ ಚಾಚಿ,ದಂಡಾಸನ ಸ್ಥಿತಿಯಲ್ಲಿ ಕುಳಿತುಕೊಳ್ಳಬೇಕು. * ಬೆನ್ನು, ಕುತ್ತಿಗೆ, ತಲೆ ನೇರವಾಗಿರಲಿ. * ಉಸಿರನ್ನು ಹೊರಹಾಕುತ್ತಾ, ನಿಮ್ಮ ದೇಹವನ್ನು ಎಡ ಅಥವಾ ಬಲ ಭಾಗಕ್ಕೆ ತಿರುಗಿಸಿ, ಎರಡೂ ಹಸ್ತಗಳನ್ನು ನೆಲದ ಮೇಲೆ ಊರಿ. * ನಿಧಾನವಾಗಿ ಉಸಿರನ್ನು ಬಿಡುತ್ತಾ, ಮುಖವನ್ನು ನೆಲದ ಕಡೆಗೆ ಬಾಗಿಸಿ, ಹಣೆ ಅಥವಾ ಗಲ್ಲವನ್ನು ನೆಲಕ್ಕೆ ಮುಟ್ಟಿಸಲು ಪ್ರಯತ್ನಿಸಿ. * ಈ ಸ್ಥಿತಿಯಲ್ಲಿ ಕೆಲವು ಸೆಕೆಂಡುಗಳ ಕಾಲ ಸಹಜ ಉಸಿರಾಟದೊಂದಿಗೆ ಇರಿ.

ಮುಕ್ತಾಯ: ಉಸಿರನ್ನು ತೆಗೆದುಕೊಳ್ಳುತ್ತಾ, ಮೇಲಕ್ಕೆ ಬಂದು, ಇದೇ ರೀತಿ ಮತ್ತೊಂದು ಬದಿಗೆ (ವಿರುದ್ಧ ದಿಕ್ಕಿಗೆ) ಅಭ್ಯಾಸ ಮಾಡಿ.

ಉಪಯೋಗಗಳು: * ಬೆನ್ನಿನ ಸ್ನಾಯುಗಳು ಬಲಗೊಳಿಸಿ ನಮ್ಯತೆ (flexibility) ಹೆಚ್ಚಿಸುತ್ತದೆ. * ಈ ಆಸನದಲ್ಲಿ ದೇಹವನ್ನು ತಿರುಗಿಸಿ ಬಾಗಿಸುವುದರಿಂದ ಜೀರ್ಣಾಂಗ ಕ್ರಿಯೆ ಉತ್ತಮಗೊಳ್ಳುತ್ತದೆ ಮತ್ತು ಮಲಬದ್ಧತೆ ನಿವಾರಣೆಯಾಗುತ್ತದೆ. * ದೇಹದಲ್ಲಿನ ಆಯಾಸ ಮತ್ತು ಒತ್ತಡವನ್ನು ಕಡಿಮೆ ಮಾಡಿ, ಮನಸ್ಸಿಗೆ ಶಾಂತಿ ನೀಡುತ್ತದೆ. * ದೇಹದಲ್ಲಿ, ಮುಖ್ಯವಾಗಿ ಕಿಬ್ಬೊಟ್ಟೆಯ ಭಾಗದಲ್ಲಿ ರಕ್ತ ಸಂಚಾರವನ್ನು ಉತ್ತಮಗೊಳಿಸುತ್ತದೆ. * ಪಾದಗಳು ಮತ್ತು ತೊಡೆಯ ಸ್ನಾಯುಗಳನ್ನು ಹಿಗ್ಗಿಸಿ ಗಟ್ಟಿಗೊಳಿಸುತ್ತದೆ.

ಗಮನಿಸಿ: ಬೆನ್ನು ನೋವು, ಸ್ಲಿಪ್ ಡಿಸ್ಕ್, ಹರ್ನಿಯಾ, ಸಿಯಾಟಿಕ್, ಸಮಸ್ಯೆ ಇರುವವರು, ಗರ್ಭಿಣಿಯರು ಈ ಆಸನವನ್ನು ಮಾಡಬಾರದು.

ಏನಾದರೂ ಸಂದೇಹಗಳಿದ್ದರೆ ಈ ನಂಬರಿಗೆ ಸಂಪರ್ಕಿಸಿ: 8762089106

ಯೋಗಾಸನಗಳನ್ನು ಯೋಗ ಶಿಕ್ಷಕರ ಮಾರ್ಗದರ್ಶನದಲ್ಲಿ ಮಾಡಬೇಕು. ಪತ್ರಿಕೆ ಓದಿ ಸ್ವಯಂ ಅಭ್ಯಾಸ ಒಳ್ಳೆಯದಲ್ಲ

# ತಂಬಾಕು ಮುಕ್ತ ಗ್ರಾಮವಾಗಿ ತಿಮ್ಲಾಪುರ



ದಾ ನಗರವಾಣಿ ಸುದ್ದಿ

ಮಲೇಬೆನ್ನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ದಾವಣಗೆರೆ, ತಾಲ್ಲೂಕು ಆಡಳಿತ, ತಾಲೂಕು ಪಂಚಾಯತಿ, ತಾಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಹಾಗೂ ಗ್ರಾಮ ಪಂಚಾಯತಿ ರಾಜನಹಳ್ಳಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ಗುರುವಾರ ತಿಮ್ಲಾಪುರ ಗ್ರಾಮವನ್ನು ತಂಬಾಕು ಮುಕ್ತ ಗ್ರಾಮವೆಂದು ಘೋಷಿಸಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶದಂತೆ ತಂಬಾಕು ಮುಕ್ತ ಹಳ್ಳಿ ಮಾರ್ಗಸೂಚಿ ಅನ್ವಯ ಜಿಲ್ಲೆಯಲ್ಲಿ ಮೊಟ್ಟ ಮೊದಲ "ತಂಬಾಕು ಮುಕ್ತ ಗ್ರಾಮ" ವನ್ನಾಗಿ ತಿಮ್ಲಾಪುರವನ್ನ ಘೋಷಿಸಿದ್ದೇವೆ ಎಂದು ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಹೆಚ್. ಬಸವರಾಜ್ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು.

ಇದು ತಂಬಾಕು ಮುಕ್ತ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ ಬುನಾದಿಯಾಗಿದೆ. ಇದೇ ರೀತಿ ಪ್ರತಿ ಹಳ್ಳಿಯು ಸಹ ತಂಬಾಕು ಮುಕ್ತ ಗ್ರಾಮವಾದಲ್ಲಿ ನಾವೆಲ್ಲರೂ ಸೇರಿ ಸದೃಢ ಭಾರತವನ್ನು ನಿರ್ಮಾಣ ಮಾಡಬಹುದು ಎಂದು ಕರೆ ನೀಡಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಅಬ್ದುಲ್ ಖಾದರ್ ಮಾತನಾಡಿ, ತಂಬಾಕು ಸೇವನೆಯಿಂದ ಬಾಯಿ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಹೃದಯಾಘಾತ, ಪಾರ್ಶ್ವವಾಯು ಮುಂತಾದ ಮಾರಣಾಂತಿಕ ಕಾಯಿಲೆಗಳಿಗೆ ಬಲಿಯಾಗುತ್ತಿದ್ದಾರೆ. ಇದನ್ನು ತಡೆಯಲಿಕ್ಕೆ ತಂಬಾಕು ಮುಕ್ತ ಗ್ರಾಮ ಎಂಬ ಶೀರ್ಷಿಕೆ ಪ್ರಮುಖ ಪಾತ್ರ ವಹಿಸುತ್ತವೆ. ಹಾಗಾಗಿ ನಾವೆಲ್ಲರೂ ಸೇರಿ ತಂಬಾಕು ಬಳಸದಂತೆ ಕ್ರಮ ವಹಿಸೋಣ ಎಂದರು.

ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ರಾಜ್ಯಮಟ್ಟದ ವಿಭಾಗಿಯ ಸಂಯೋಜಕರಾದ ಮಹಾಂತೇಶ್ ಉಳ್ಳಾಗಡ್ಡಿ, ಜಿಲ್ಲಾ ಮಟ್ಟದ ಜಿಲ್ಲಾ ಸಲಹೆಗಾರರಾದ ಸತೀಶ್ ಕಲಹಾಳ, ಸಾಮಾಜಿಕ ಕಾರ್ಯಕರ್ತ ಶೈಲಾ ಶಾಮನೂರ್ ಇದ್ದರು.

ರಾಜನಹಳ್ಳಿ ಗ್ರಾ.ಪಂ. ಮಾಜಿ ಸದಸ್ಯ ಜಿ. ಮಂಜುನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಬಿಳಿಸನೂರು ಪ್ರಾ.ಆ.ಕೇಂದ್ರದ ವೈದ್ಯಾಧಿಕಾರಿ ಡಾ. ಉಷಾ, ರಾಜನಹಳ್ಳಿ ಗ್ರಾಮ ಪಂಚಾಯತಿ ಪಿ.ಡಿ.ಓ. ಸಂಗಮೇಶ್, ತಾ.ಹಿ. ನಿರೀಕ್ಷಣಾಧಿಕಾರಿಯಾದ ಎಂ. ಉಮಣ್ಣ, ತಾ.ಪ್ರಾ. ಆರೋಗ್ಯ ಸುರಕ್ಷತಾಧಿಕಾರಿ ಶ್ರೀಮತಿ ಕಾರ್ಲಿನ್, ಆರೋಗ್ಯ ನಿರೀಕ್ಷಣಾಧಿಕಾರಿ ದಾದಾಪೀರ್, ಸಮುದಾಯ ಆರೋಗ್ಯಾಧಿಕಾರಿ ರಮ್ಯ, ಶಾಲೆಯ ಮುಖ್ಯ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು, ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀ ರಾತುದಾರ ರೊಡನೆಯೇ ವ್ಯವಹ ರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

## ನಾಟಕಗಳು ಸಮಾಜದ ಕೈಗನ್ನಡಿ...

(1ನೇ ಪುಟದಿಂದ) ಸುಳಿಯಲ್ಲಿದೆ. ದಾವಣಗೆರೆ ರಂಗಭೂಮಿ, ರಂಗ ಕಲಾವಿದರಿಗೆ ಸದಾ ಅಸರೆಯಾದ ಊರು. ದಿವಂಗತ ಶಾಮನೂರು ಶಿವಶಂಕರಪ್ಪ ಕಲಾವಿದರಿಗೆ ನಿವೇಶನ ನೀಡಿದ್ದರು. ಮಾಜಿ ಸಚಿವ ಎಸ್ಎಸ್ ಮಲ್ಲಿಕಾರ್ಜುನ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ಶಾಸಕ ಸಮರ್ಥ ಶಾಮನೂರು ಮುಂದಿನ ದಿನಗಳಲ್ಲಿ ರಂಗಭೂಮಿ ಕಲಾವಿದರು, ಸಿಬ್ಬಂದಿಗೆ ನಿವೇಶನ ಹಾಗೂ ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸಲೆಂದು ಮನವಿ ಮಾಡುವುದಾಗಿ ತಿಳಿಸಿದರು.

ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಮಾತನಾಡಿ, ದಾವಣಗೆರೆ ವೃತ್ತಿ ರಂಗಭೂಮಿಯ ತವರುಮನೆ. ಕಂಪನಿ ನಾಟಕಗಳ ಶತಮಾನದ ಇತಿಹಾಸವಿರುವ ಈ ಊರಿಗೆ ಇದುವರೆಗೆ ನೂರಿಪ್ಪತ್ತಕ್ಕೂ ಹೆಚ್ಚು ಕಂಪನಿಗಳು ಬಂದಿದ್ದು ಯಾವೂ ನಷ್ಟ ಅನುಭವಿಸಿಲ್ಲ. ಈಗ್ಗೆ ದಶಕದ ಹಿಂದೆ ಬೆಂಕಿಗೆ ಆಹುತಿಯಾದ ಜೇವರ್ಗಿ ಕಂಪನಿಯನ್ನು ಸುಟ್ಟ ಜಾಗದಲ್ಲಿ ಕಟ್ಟಿಕೊಟ್ಟ ಸಹೃದಯ ಪ್ರೇಕ್ಷಕರು ಈ ಊರಿನವರು. ನಮ್ಮ ದಾವಣಗೆರೆ ರಂಗಾಯಣದ ವತಿಯಿಂದ ಸದರಿ ಕಂಪನಿಗೆ ಹೊಸದೊಂದು ನಾಟಕದ ತರಬೇತಿ ನೀಡಿ ಹೊಸ ಪ್ರಯೋಗಕ್ಕೆ ಅವಕಾಶ ಮಾಡುವುದಾಗಿ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನಾಟಕ ಕಂಪನಿ ಮಾಲೀಕ ಪಾಪು ಕಲ್ಲೂರ, ವ್ಯವಸ್ಥಾಪಕ ಮಾದೇವಪ್ಪ ಹುಣಸ್ಯಾಳ, ಪಾಲಿಕೆ ಮಾಜಿ ಸದಸ್ಯ ಎ.ನಾಗರಾಜ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್. ಬಡದಾಳ್, ಶಂಕರಲೀಲಾ ಗ್ಯಾಸ್ ಏಜೆನ್ಸಿ ಮಾಲೀಕ ಸಿ.ಎಲ್.ಚಂದ್ರಧರ, ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘದ ಅಧ್ಯಕ್ಷ ಮಹೇಶ್ವರಪ್ಪ ದೊಡ್ಡಮನಿ, ಕಲಾವಿದ, ಪತ್ರಕರ್ತ ಬಸವರಾಜ ಐರಣಿ, ರಂಗಭೂಮಿ ಕಲಾವಿದ ಚಿಂದೋಡಿ ಮಧುಕೇಶ, ಮಾಲತೇಶ ಪೂಜಾರ ಇತರರು ಇದ್ದರು.

## ನೀಟ್ ಪರೀಕ್ಷೆ ಸುಸೂತ್ರವಾಗಿ ...

(1ನೇ ಪುಟದಿಂದ) ಅಭ್ಯರ್ಥಿಗಳಿಗೆ ವಸ್ತ್ರ ಸಂಹಿತೆ: ನಿಗದಿಪಡಿಸಿದ ವಸ್ತ್ರ ಸಂಹಿತೆ(ಡ್ರೆಸ್ ಕೋಡ್)ನ್ನು ಪ್ರತಿಯೊಬ್ಬ ಅಭ್ಯರ್ಥಿಯು ಕಡ್ಡಾಯವಾಗಿ ಪಾಲಿಸಬೇಕು. ಉದ್ದ ತೋಳಿನ ಹಾಗೂ ತಲೆ ಮುಚ್ಚುವ ಉಡುಪು ಧರಿಸಿ ಬರುವಂತಿಲ್ಲ. ಬೆಲ್ಟ್, ಟೋಪಿ ಹಾಗೂ ಯಾವುದೇ ಆಭರಣಗಳನ್ನು ಧರಿಸುವಂತಿಲ್ಲ(ಮಂಗಳಸೂತ್ರ ಹೊರತುಪಡಿಸಿ). ಶೂ ಹಾಕಿಕೊಂಡು ಬರುವಂತಿಲ್ಲ, ಸಾದಾ ಚಪ್ಪಲಿಗಳನ್ನು ಧರಿಸಿರಬೇಕು ಎಂದು ತಿಳಿಸಿದರು. ಪರೀಕ್ಷಾರ್ಥಿಗಳು ಹಾಗೂ ಕೊಠಡಿಯ ಮೇಲ್ವಿಚಾರಕರಾಗಲಿ ಪರೀಕ್ಷಾ ಕೇಂದ್ರದೊಳಗೆ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳಾದ ಮೊಬೈಲ್, ಬ್ಲೂಟೂತ್, ಇಯರ್ ಫೋನ್‌ಗಳು, ಮೈಕ್ರೋಫೋನ್, ಪೇಜರ್, ವೈರಲೆಸ್ ಸೆಟ್, ಲಾಗ್ ಟೇಬಲ್, ಕ್ಯಾಲಕ್ಯುಲೇಟರ್ ಹಾಗೂ ಗಡಿಯಾರಗಳನ್ನು ನಿಷೇಧಿಸಿದೆ. ಈ ಕುರಿತಂತೆ ಅಧಿಕಾರಿಗಳು ಎಚ್ಚರವಹಿಸಬೇಕು ಎಂದು ಸೂಚಿಸಿದರು.

ನೀಟ್ ಪರೀಕ್ಷೆಯು ಜೂನ್ 21ರಂದು ಮಧ್ಯಾಹ್ನ 2 ರಿಂದ ಸಂಜೆ 6.15ರ ವರೆಗೆ ನಡೆಯಲಿದ್ದು, ಮಳೆಗಾಲ ಇರುವುದರಿಂದ ಪರೀಕ್ಷಾ ಕೇಂದ್ರದ ಕಟ್ಟಡದಲ್ಲಿ ನೀರು ಸೋರಿಕೆಯಾಗದಂತೆ ಮುಂಚಿತವಾಗಿ ತಪಾಸಣೆ ಮಾಡಲು ತಿಳಿಸಿದರು. ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡುವಂತೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶೇಖರ.ಹೆಚ್.ಟಿ, ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

# ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡುವಲ್ಲಿ ಬ್ಯಾಂಕುಗಳು ಆದ್ಯತೆ ನೀಡಬೇಕು: ಡಾ|| ಪ್ರಭಾ

(1ನೇ ಪುಟದಿಂದ) ಎಲ್ಲಾ ಬ್ಯಾಂಕುಗಳಿಗೂ ಐ.ಬಿ.ಎ ನಿಯಮಾವಳಿಗಳು ಅನ್ವಯಿಸುತ್ತವೆ. ಈ ಯೋಜನೆಯಡಿ 7.5 ಲಕ್ಷ ರೂ. ವರೆಗಿನ ಶೈಕ್ಷಣಿಕ ಸಾಲಕ್ಕೆ ಯಾವುದೇ ರೀತಿಯ ಆಧಾರ ಅಥವಾ ಜಾಮೀನು ಪಡೆಯುವಂತಿಲ್ಲ. ಅವರ ಕೋರ್ಸ್‌ನ ಶುಲ್ಕದ ರಚನೆಗೆ ಅನುಗುಣವಾಗಿ ಸಾಲ ನೀಡಬೇಕಾಗುತ್ತದೆ. ಮ್ಯಾನೇಜ್‌ಮೆಂಟ್ ಅಥವಾ ಪೇಮೆಂಟ್ ಕೋಟಾದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 4 ಲಕ್ಷ ರೂ. ವರೆಗಿನ ಸಾಲಕ್ಕೆ ಯಾವುದೇ ಶ್ಯೂರಿಟಿ ಅಗತ್ಯವಿರುವುದಿಲ್ಲ. ಆದರೆ, 4 ಲಕ್ಷ ರೂ. ಮೇಲ್ಪಟ್ಟ ಸಾಲಕ್ಕೆ ನಿಯಮಾನುಸಾರ ಶ್ಯೂರಿಟಿ ಕಡ್ಡಾಯವಾಗಿರುತ್ತದೆ ಎಂದು ಹೇಳಿದರು.

ಐ.ಬಿ.ಎ ಪಟ್ಟಿಯಲ್ಲಿರುವ ದೇಶದ 500 ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಶ್ಯೂರಿಟಿ ಇಲ್ಲದೆಯೇ 50 ಲಕ್ಷ ರೂ. ವರೆಗೆ ಶೈಕ್ಷಣಿಕ ಸಾಲ ನೀಡಲು ಅವಕಾಶ ಕಲ್ಪಿಸಲಾಗಿದೆ. ಬ್ಯಾಂಕುಗಳ ಇತರ ವಲಯಗಳಿಗೆ ಹೋಲಿಸಿದರೆ ಶೈಕ್ಷಣಿಕ ಸಾಲದ ವಲಯದಲ್ಲಿ ವಸೂಲಾಗದ ಸಾಲದ ಪ್ರಮಾಣ ಅತ್ಯಂತ ಕಡಿಮೆಯಿದೆ. ಆದಕಾರಣ, ಆದ್ಯತಾ ವಲಯದ ಸಾಲ ವಿತರಣೆಯಡಿ ಶೈಕ್ಷಣಿಕ ಸಾಲಗಳಿಗೆ ಬ್ಯಾಂಕುಗಳು ಮೊದಲ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ ಅವರು ಮಾತನಾಡಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಅಡಿಯಲ್ಲಿ ಲಭ್ಯವಿರುವ ನಿಧಿಯನ್ನು ಬ್ಯಾಂಕುಗಳು ಮತ್ತು ಕಂಪನಿಗಳು ತಾವು ಕಾರ್ಯನಿರ್ವಹಿಸುವ ಜಿಲ್ಲೆಯ ವ್ಯಾಪ್ತಿಯಲ್ಲೇ ಬಳಸಬೇಕು, ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಡಿಸಿಸಿಬಿ ಸಭೆಯ ನಿರ್ದೇಶನದಂತೆ, ಬ್ಯಾಂಕ್ ಅಥವಾ ಕಂಪನಿಗಳು ತಮ್ಮ ಗ್ರಾಹಕರನ್ನು ಹೊಂದಿರುವ ಹಾಗೂ ಲಾಭ ಗಳಿಸುವ ಜಿಲ್ಲೆಯಲ್ಲೇ ಕಡ್ಡಾಯವಾಗಿ ಶೇಕಡಾ 2 ರಷ್ಟು ಸಿಎಸ್‌ಆರ್ ಹಣವನ್ನು ವ್ಯಯಿಸಬೇಕು. ಇದನ್ನು ಬಿಟ್ಟು ಬೇರೆ ಜಿಲ್ಲೆಗಳಿಗೆ ಹಣ ವರ್ಗಾಯಿಸಲು ಅವಕಾಶವಿಲ್ಲ ಎಂದು ತಿಳಿಸಿದರು.

ವಿವಿಧ ಇಲಾಖೆಯಗಳಿಂದ ಸಾಲ ಕೋರಿ ಬಂದ ಅರ್ಜಿಗಳಲ್ಲಿ, ತಿರಸ್ಕೃತಗೊಂಡ ಅರ್ಜಿಗಳ ಪಟ್ಟಿಯನ್ನು ಬ್ಯಾಂಕುಗಳು 3 ರಿಂದ 6 ತಿಂಗಳವರೆಗೆ ಬಾಕಿ ಇಟ್ಟುಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆ. ಅಧಿಕಾರಿಗಳು ಪ್ರತಿ 15 ದಿನಗಳಿಗೊಮ್ಮೆ ಬ್ಯಾಂಕ್ ಗಳಿಗೆ ಭೇಟಿ ನೀಡಿ ಇವುಗಳನ್ನು ಪರಿಶೀಲಿಸಬೇಕು. ತಾಂತ್ರಿಕ ಅಥವಾ ದಾಖಲಾತಿ ಕೊರತೆಯಿಂದ ಸಾಲ ನೀಡಲು ಸಾಧ್ಯವಾಗದಿದ್ದಲ್ಲಿ, ತಡಮಾಡದೇ ಆ ಅವಕಾಶವನ್ನು ಮುಂದಿನ ಅರ್ಹ ಅರ್ಜಿದಾರರಿಗೆ ವರ್ಗಾಯಿಸಲು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರಿಗೆ ಉದ್ಯೋಗ ಮತ್ತು ಆದಾಯದ ಮೂಲ ಕಲ್ಪಿಸುವಲ್ಲಿ ಬ್ಯಾಂಕುಗಳ ಜವಾಬ್ದಾರಿ ದೊಡ್ಡದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಗಿತ್ತೇ ಮಾಧವ ವಿಠ್ಠಲರಾವ್ ಅವರು ಮಾತನಾಡಿ, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ , ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆ ಬಗ್ಗೆ ಗ್ರಾಮ ಪಂಚಾಯಿತ ಮಟ್ಟದಲ್ಲಿ ಪಿಡಿಒ, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಪ್ರತಿ ಹಳ್ಳಿ ಹಳ್ಳಿಗಳಲ್ಲಿಯೂ ಈ ಕುರಿತು ಹೆಚ್ಚು ಪ್ರಚಾರ ನೀಡಿ ಜಾಗೃತಿ ಮೂಡಿಸಲಾಗುವುದು. ಈ ಯೋಜನೆಯ ಪ್ರಯೋಜನೆಯು ಪ್ರತಿಯೊಬ್ಬರಿಗೂ ತಲುಪಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಎಫ್‌ಐಡಿಡಿ ಉಪ ವ್ಯವಸ್ಥಾಪಕ ಭೀಮ್ ಚೌದರಿ, ಕೆನರಾ ಬ್ಯಾಂಕಿನ ಎಜಿಎಂ ವಿಜೇಶ್ ಕುಮಾರ್ ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕಿ ರೇಷ್ಮಾ ಕೌಸರ್ , ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ರಾಘವೇಂದ್ರ ಪ್ರಸಾದ್ ಹಾಗೂ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಸ್ರೇಲ್ ವೈಮಾನಿಕ ದಾಳಿಗೆ ತತ್ತರಿಸಿದ...

(1ನೇ ಪುಟದಿಂದ) ಲೆಬನಾನ್ ಸೇರಿದಂತೆ ಸಂಘರ್ಷ ಪೀಡಿತ ಎಲ್ಲಾ ಪ್ರದೇಶಗಳಲ್ಲಿ ತಕ್ಷಣದ ಕದನ ವಿರಾಮ ಜಾರಿಯಾಗಬೇಕು ಹಾಗೂ ಲೆಬನಾನ್‌ನ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಬೇಕು ಎಂದು ಉಲ್ಲೇಖಿಸಲಾಗಿದೆ.

ಆದರೆ, ಈ ವರ್ಷದ ಅಂತ್ಯದೊಳಗೆ ಚುನಾವಣೆ ಎದುರಿಸಲಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಹಿಜ್ಬುಲ್ಲಾ ಬೆದರಿಕೆ ಸಂಪೂರ್ಣವಾಗಿ ನಿವಾರಣೆಯಾಗುವವರೆಗೆ ಲೆಬನಾನ್‌ನಿಂದ ಇಸ್ರೇಲ್ ಸೇನೆ ಹಿಂತೆಗೆದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಇದೀಗ ಲೆಬನಾನ್‌ನಲ್ಲಿ ನಡೆಯುತ್ತಿರುವ ದಾಳಿಗಳ ನಡುವೆಯೇ, ಇರಾನ್ ಮತ್ತು ಅಮೆರಿಕಾ ನಡುವೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆಯಬೇಕಿದ್ದ ಮುಂದಿನ ಹಂತದ ಮಾತುಕತೆಗಳು ಮುಂದೂಡಲ್ಪಟ್ಟಿವೆ.

ಶ್ರೀ ವೀರಭದ್ರದೇವ ಚಿಕ್ಕಹಾಲಿವಾಣ | ಶ್ರೀ ಕಾಳಹಸ್ತೀಶ್ವರ ಶ್ರೀ ಕಾಳಹಸ್ತಿ | ಶ್ರೀ ಜ್ಞಾನಪ್ರಸೂನಾಂಭ ಶ್ರೀ ಕಾಳಹಸ್ತಿ

## ರೈತರು, ಸಾರ್ವಜನಿಕರು ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ

ಮಳೆ–ಬೆಳೆ ಬೇಕು ಅಂದರೆ ಮುಖ್ಯಮಂತ್ರಿಗಳನ್ನು ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಚಿಕ್ಕಹಾಲಿವಾಣ ಗ್ರಾಮದ ಶ್ರೀ ವೀರಭದ್ರ ದೇವಸ್ಥಾನಕ್ಕೆ ಸಮರೋಪಾದಿಯಲ್ಲಿ ಕರೆದುಕೊಂಡು ಬರಬೇಕು. ಕಾಲಚಕ್ರದ ಕೆಲಸಗಳನ್ನು ಮಾಡಬೇಕಾಗಿದೆ. ಇದರಿಂದ ನಾಡಿನಲ್ಲಿ ದೇಶದಲ್ಲಿ ಜಗತ್ತಿನಲ್ಲಿ ಮಳೆ–ಬೆಳೆಗಳು ಆಗಿ ಸಮೃದ್ಧಿ ಆಗುತ್ತದೆ. ಪತ್ರಿಕೆಗಳಲ್ಲಿ ಮುಂಚಿತವಾಗಿ ಪ್ರಕಟಿಸಿ ಈ ದೇವಸ್ಥಾನಗಳಿಂದ ಮಳೆ–ಬೆಳೆಗಳನ್ನು ತರಲಾಗಿದೆ. ಈ ದೇವಸ್ಥಾನಗಳಿಂದ ಡಾ|| ರಾಜ್‌ಕುಮಾರ್ ಅವರು ವೀರಪ್ಪನ್ನಿಂದ ಬಿಡುಗಡೆಯಾಗಿದ್ದಾರೆ. ಪ್ರಸಿದ್ಧ ನಟರಾದ ಶಿವರಾಜ್‌ಕುಮಾರ್, ಮಾನ್ಯ ಮಂತ್ರಿಗಳಾದ ಮಧು ಬಂಗಾರಪ್ಪನವರಿಗೂ ಈ ವಿವರ ತಿಳಿದಿದೆ. ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ ಮುಂದೆ ಬರಗಾಲ ಬರುತ್ತದೆ ತಕ್ಷಣ ಈ ದೇವಸ್ಥಾನಗಳಿಗೆ ಬಂದು ಕಾಲಚಕ್ರದ ಕೆಲಸಗಳನ್ನು ಮಾಡಿದರೆ ಮಳೆ–ಬೆಳೆಗಳು ಸಮೃದ್ಧಿಯಾಗುತ್ತದೆಂದು ತಿಳಿಸಲಾಗಿತ್ತು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಬರದಿದ್ದರೇ ರಾಜಕೀಯವಾಗಿ ವೈಯಕ್ತಿಕವಾಗಿ ತೊಂದರೆಯಾಗುತ್ತದೆಂದು ತಿಳಿಸಲಾಗಿತ್ತು. ಅವರು ಬರಲಿಲ್ಲ. ಬಂದಿದ್ದರೆ ಮಳೆ–ಬೆಳೆಗಳು ಆಗುತ್ತಿದ್ದವು. ದೇವರು ದೇವಸ್ಥಾನಗಳನ್ನು ಅಲಕ್ಷ್ಯ ಮಾಡಲಾಗುತ್ತಿದೆ. ಸಮಾಜದ ಅನಿಷ್ಟ ಪದ್ಧತಿಗಳು, ಸಂಸ್ಕೃತಿ ನಾಶ, ಗೋಹತ್ಯೆ, ಮದ್ಯಪಾನ, ವೇಶ್ಯಾವಾಟಿಕೆ, ಮುತ್ತು ಕಟ್ಟಿಸುವುದು, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಪ್ರಾಣಿ ಹಿಂಸೆ ಮಾಡಿ ಮಾರಿಹಬ್ಬ ಮಾಡುವುದು ಇವುಗಳಿಂದಲೇ ಭೀಕರ ಬರಗಾಲಗಳು, ಭೂಕಂಪಗಳು ಮತ್ತು ಅಪಘಾತಗಳು ಸಂಭವಿಸುತ್ತಿವೆ. ಸರಿ ಮಾಡುವ ಕೆಲಸಗಳು ಬಹಳ ಇವೆ. ತಕ್ಷಣ ಮುಖ್ಯಮಂತ್ರಿಗಳನ್ನು ಮೇಲ್ಕಂಡ ಶ್ರೀ ವೀರಭದ್ರ ದೇವಸ್ಥಾನಕ್ಕೆ ಸಮರೋಪಾದಿಯಲ್ಲಿ ಕರೆದುಕೊಂಡು ಬರಬೇಕು. ದೇವರ ಮುಂದೆ ಯಾವ ಎಲ್‌ನೀನೋ ಅಡ್ಡ ಬರುವುದಿಲ್ಲ. ನಾಡಿನಲ್ಲಿ ದೇಶದಲ್ಲಿ ಜಗತ್ತಿನಲ್ಲಿ ಮಳೆ–ಬೆಳೆಗಳು ಸಮೃದ್ಧಿಯಾಗುತ್ತವೆ. ಮುಖ್ಯಮಂತ್ರಿಗಳು ಈ ದೇವಸ್ಥಾನಕ್ಕೆ ಬರದೇ ಹೋದರೆ ಬರಗಾಲ, ಭೂಕಂಪಗಳಿಂದ ಜಾಗತಿಕ ಕೇಡುಗಳಿಂದ ಲಕ್ಷಾಂತರ ಜನ ಸಾಯಬಹುದು. ಕೋಟ್ಯಾಂತರ ಜನ ಚಿತ್ರಹಿಂಸೆ ಅನುಭವಿಸಬಹುದು. ಇದಕ್ಕೆಲ್ಲಾ ಆಡಳಿತ ನಡೆಸುವವರೆ ಹೊಣೆ ಆಗುತ್ತಾರೆ. ಜಾಗತಿಕ ಕೇಡುಗಳು ಬಂದಾಗ ಬೇರೆ ದೇಶಗಳಲ್ಲಿ ಸರ್ಕಾರದವರು ಏನಾದರೂ ಪರಿಹಾರವಿದೆಯೇ ಎಂದು ಜನತೆಯನ್ನು ಕೇಳಿಕೊಳ್ಳುತ್ತಾರೆ. ನಮ್ಮ ನಾಡಿನಲ್ಲಿ ದೇಶದಲ್ಲಿ ನಾವೇ ಮುಂದಾಗುವುದನ್ನು ತಿಳಿಸಿದರೂ, ಪರಿಹಾರ ತಿಳಿಸಿದರೂ ಬರುವುದಿಲ್ಲ. ಇದರಿಂದ ಬರಗಾಲ ಮತ್ತು ಜಾಗತಿಕ ಕೇಡುಗಳು ಆಗುತ್ತಿವೆ. ಅಲಕ್ಷ್ಯ ಮಾಡಬಾರದು.

**ವೀರ ಧರ್ಮೇಶ್ವರ**, ಮೊಬೈಲ್ ನಂ.9686871536
ಶ್ರೀ ವೀರಭದ್ರ ದೇವರ ದೇವಸ್ಥಾನ, ಚಿಕ್ಕಹಾಲಿವಾಣ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

## ಗ್ರಾಮ ಪಂಚಾಯಿತಿ ಕಾರ್ಯಾಲಯ ಆನಗೋಡು

ದಾವಣಗೆರೆ ತಾಲ್ಲೂಕು. ದಾವಣಗೆರೆ ಜಿಲ್ಲೆ

ಆಗ್ರಾಪಂಸಂ /2026–27 ದಿನಾಂಕ:–19–06–2026

### ಇ-ಟೆಂಡರ್ ಪ್ರಕಟಣೆ

ಆನಗೋಡು ಗ್ರಾಮ ಪಂಚಾಯಿತಿಯಲ್ಲಿ ಟೆಂಡರ್‌ನಲ್ಲಿನ ಷರತ್ತುಗಳ ಪ್ರಕಾರ 2025–26ನೇ ಸಾಲಿನ ಆನಗೋಡು ಗ್ರಾಮ ಪಂಚಾಯಿತಿಯ 15ನೇ ಹಣಕಾಸು ಯೋಜನೆಯಡಿ ಆನಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಅಗತ್ಯ ಕುಡಿಯುವ ನೀರಿನ ಮೋಟಾರ್ ರಿವೈಂಡಿಂಗ್‌ಗಳಿಗೆ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಾಗಿ ಅರ್ಹ ಟೆಂಡರ್‌ದಾರರು / ಸಂಸ್ಥೆಗಳು ಭರ್ತಿ ಮಾಡಿದ ಟೆಂಡರ್‌ಗಳನ್ನು ಈ ಕೆಳಗಿನಂತೆ ಅನ್ವಹಿಸಲಾಗಿದ್ದು (ಟೆಂಡರ್ ಸಂಖ್ಯೆ : **RDPR/2026-27/SE4034**) ಸದರಿ ಟೆಂಡರ್‌ಗೆ ಸಂಬಂದಿಸಿದ ದಾಖಲೆಗಳನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (**www.kppp.karnataka.gov.in**)ನಿಂದ ದಿನಾಂಕ : 20–06–2026 ರಿಂದ 04–07–2026 ರ ಸಾಯಂಕಾಲ 05.30 ಗಂಟೆಯೊಳಗೆ ಡೌನ್‌ಲೋಡ್ ಮಾಡಿಕೊಂಡು ದಿನಾಂಕ : 04–07–2026 ರ ಸಂಜೆ 5.30ಗಂಟೆಯವರಗೆ ಇ–ಟೆಂಡರ್‌ನ್ನು ಸಲ್ಲಿಸಬಹುದು. ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಆನಗೋಡು ಗ್ರಾಮ ಪಂಚಾಯಿತಿ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

**ಟೆಂಡರ್ ವೇಳಾಪಟ್ಟಿ**

| | | |
|---|---|---|
| 1 | ಖಾಲಿ ಟೆಂಡರ್ ಅರ್ಜಿಗಳನ್ನು (ಅನುಬಂಧ–1 ಮತ್ತು ಅನುಬಂಧ–2ನ್ನು) ಇ–ಪ್ರಕ್ಯೂರ್‌ಮೆಂಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ | ದಿನಾಂಕ : 20–06–2026 ರಿಂದ 04–07–2026 ರಂದು ಸಾಯಂಕಾಲ 05.30 ಗಂಟೆಯೊಳಗೆ |
| 2 | ಇ–ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಇಂಧೀಕರಿಸಲು ಕೊನೆಯ ದಿನಾಂಕ | ದಿನಾಂಕ : 04–07–2026 ರ ಸಂಜೆ 05.30ಗಂಟೆಗೆ |
| 3 | ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ /ತಾಂತ್ರಿಕ, ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 06–07–2026 ರ ಬೆಳಿಗ್ಗೆ 11.00ಗಂಟೆಗೆ |
| 4 | ಇ–ಪೋರ್ಟಲ್‌ನಲ್ಲಿ ದಾಖಲಾತಿಗಳ /ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ | ದಿನಾಂಕ : 06–07–2026 ರ ಬೆಳಿಗ್ಗೆ 11.00ಗಂಟೆಗೆ |

ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಪೋರ್ಟಲ್ www.kppp.karnataka.gov.in ಸಂಪರ್ಕಿಸಬಹುದಾಗಿದೆ.

ಸಹಿ/– **ಪಂಚಾಯಿತಿ ಅಭಿವೃದ್ಧಿ ಅಧಿಕಾರಿ**
ಗ್ರಾಮ ಪಂಚಾಯಿತಿ, ಆನಗೋಡು

**ಗೀತಾಂಜಲಿ** DOLBY DIGITAL dts
ದಿನ 4 ಆಟಗಳು
19-06-2026 ರಿಂದ ಪ್ರಾರಂಭ
ಕನ್ನಡ ಚಿತ್ರ
ಸಮಯ: ಬೆ: 11ಕ್ಕೆ, ಮ: 2ಕ್ಕೆ, ಸಂ: 6ಕ್ಕೆ, ರಾ: 9ಕ್ಕೆ




ದರ್ಶನ್ ನಟಿಸಿರುವ–ಕಲಾಸಿಪಾಳ್ಯ

**ಅಶೋಕ** DOLBY DIGITAL dts
ದಿನ 4 ಆಟಗಳು
19-06-2026 ರಿಂದ ಪ್ರಾರಂಭ
ticket avabale bookmyshow
ತೆಲುಗು ಚಿತ್ರ
ಸಮಯ: ಬೆಳಿಗ್ಗೆ 11ಕ್ಕೆ ಮ:2ಕ್ಕೆ, ಸಂಜೆ: 6ಕ್ಕೆ, ರಾತ್ರಿ: 9ಕ್ಕೆ:




ಗೋಲ್ಡನ್ ಕ್ಲಾಸ್: 250 ರೂ, ಬಾಲ್ಕನಿ: 200 ರೂ, ಫಸ್ಟ್ ಕ್ಲಾಸ್: 150 ರೂ

**ವಸಂತ** 4K DOLBY ATMOS
ದಿನ 4 ಆಟಗಳು
ಜನಭರಿತ 3ನೇ ವಾರ
Tickets are available in bookmyshow
ಕನ್ನಡ–ತೆಲುಗು ಚಿತ್ರ
ಸಮಯ: ಕನ್ನಡ: ಬೆ:11, ಮ:2–ತೆಲುಗು: ಸಂ:5.40, ರಾ:9ಕ್ಕೆ




ರಾಮ್ ಚರಣ್ ನಟನೆಯ ಬಹುನಿರೀಕ್ಷಿತ ಚಿತ್ರ- ಪೆದ್ದಿ

# ಬಸ್‌ಸ್ಟ್ಯಾಂಡ್ ಸರ್ಕಲ್‌ನ 3 ರಸ್ತೆಗಳಿಗೆ ಹಂಪ್ಸ್‌ಗಳನ್ನು ನಿರ್ಮಿಸಿ-ರವೀಂದ್ರಗೌಡ



ದಾ ನಗರವಾಣಿ ಸುದ್ದಿ

ರಾಣೇಬೆನ್ನೂರು, ಜೂ.19: ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನೊಳಗೊಂಡ ಹಲಗೇರಿ ಬಸ್ಟ್ಯಾಂಡ ಹತ್ತಿರ ಮೂರು ದಿಕ್ಕಿನಿಂದ ಕೂಡುವ ಸರ್ಕಲ್‌ನಲ್ಲಿ ಮೂರು ರಸ್ತೆಗಳಿಗೆ ಬೃಹತ್ ಪ್ರಮಾಣದ ರಸ್ತೆ ಹಂಪ್ಸಗಳನ್ನು ನಿರ್ಮಿಸಿ, ಸಿಗ್ನಲ್ ಅಳವಡಿಸಿ, ರಸ್ತೆ ಸುರಕ್ಷತೆ ಕಾಪಾಡಿ, ಅಮಾಯಕ ಜನರ ಪ್ರಾಣ ಉಳಿಸದಿದ್ದರೆ ಮುಂದಿನ ವಾರ ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕರೊಂದಿಗೆ ಇದೇ ಸ್ಥಳದಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳನ್ನು ಸಂಪೂರ್ಣ ಬಂದ್ ಮಾಡಲಾಗುವುದೆಂದು ರೈತ ಮುಖಂಡ ರವಿಂದ್ರಗೌಡ ಪಾಟೀಲ ಹೇಳಿದರು.

ತಾಲೂಕಿನ ಹಲಗೇರಿ ಪಟ್ಟಣದ ಬಸ್ಟ್ಯಾಂಡ ಹತ್ತಿರ ರೈತಪರ, ಕನ್ನಡಪರ, ಪ್ರಜ್ಞಾವಂತ ನಾಗರಿಕರ ಪರವಾಗಿ ರಸ್ತೆ ಹಂಪ್ಸ್ ನಿರ್ಮಾಣಕ್ಕಾಗಿ ಒತ್ತಾಯಿಸಿ ಹಮ್ಮಿಕೊಂಡ ಪ್ರತಿಭಟನಾ ವೇಳೆಯಲ್ಲಿ ಮಾತನಾಡಿದ ಅವರು, ಹಲಗೇರಿ ಪಟ್ಟಣದಲ್ಲಿ ರಾಜ್ಯ ಮತ್ತು ರಾಷ್ಟೀಯ ಹೆದ್ದಾರಿಗಳು ಅಂದರೆ ಹರಿಹರ ಸಮ್ಮಸಗಿ (ಬೀರೂರು-ಕಡೂರು) ಗದಗ-ಹೊನ್ನಾಳಿ ರಸ್ತೆಗಳು ಒಂದೇ ಕಡೆ ಕೂಡುವುದರಿಂದ ವಾಹನ ದಟ್ಟಣೆ ಹೆಚ್ಚಾಗಿರುವದರಿಂದ ಸಾಕಷ್ಟು ಅಪಘಾತಗಳು ಸಂಭವಿಸುತ್ತವೆ. ಇಲ್ಲಿ ರಸ್ತೆ ಹಂಪ್ಸ್ ಅನಿವಾರ್ಯವಾಗಿದೆ ಆದ್ದರಿಂದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಅಧ್ಯಕ್ಷರಾದ ಮಾನ್ಯ ಹಾವೇರಿ ಜಿಲ್ಲಾಧಿಕಾರಿಗಳು ಇತ್ತ ಗಮನಹರಿಸಬೇಕೆಂದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಸೋಮಣ್ಣ ಮಾಳಗೇರ, ಸಿದ್ದಪ್ಪ ಕನ್ನಪ್ಪಳವರ, ಹಸನಸಾಬ ಗೋಪನಾಳ, ಸತ್ತಾರಸಾಬ ಐರಣಿ, ಶ್ರೀನಿವಾಸ ಪಾಟೀಲ, ಹನುಮಂತಪ್ಪ ಮಡಿವಾಳರ, ಸೋಮಣ್ಣ ಕನ್ನಪ್ಪಳವರ, ಬಾಷಾಸಾಬ ಕರ್ಜಗಿ ಮಾತನಾಡಿದರು.

ದಿಢೀರನೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಲೋಕೋಪಯೋಗಿ ಇಲಾಖೆಯ ಇಂಜಿನೀಯರ್ ಸುಹಾಸ ರವರು ಪ್ರತಿಭಟನಾಕಾರರ ಸಮಸ್ಯೆ ಆಲಿಸಿ ಪ್ರತಿಭಟನಾಕಾರರು ಸಲ್ಲಿಸಿದ ಮನವಿಯನ್ನು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಯ ಮುಖ್ಯಸ್ಥರಿಗೂ ಹಾಗೂ ಜಿಲ್ಲಾಧಿಕಾರಿಗಳಿಗೂ ಕಳುಹಿಸಿ ವಾರದೊಳಗೆ ಸಮಸ್ಯೆ ಬಗೆಹರಿಸಲಾಗುವುದೆಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಶಿವಾನಂದಪ್ಪ ಬೆಲ್ಲದ, ಹರಿಹರಗೌಡ ಪಾಟೀಲ, ಪ್ರಕಾಶ ಹರಿಹಾಳದವರ, ಯಲ್ಲಪ್ಪ ಓಲೇಕಾರ, ರೈತ ಮಹಿಳಾ ಘಟಕದ ಅಧ್ಯಕ್ಷರಾದ ಚಂದ್ರಮ್ಮ ಎನ್. ಮಾಗನೂರು, ತುಂಗಮ್ಮ ಪಾಟೀಲ, ಸೈಯದ್ ಚಳಗೇರಿ, ಸುನಿತಾ ಕಾಯಕಾದ, ಶಾಂತಮ್ಮ ಮುದಿಹಳ್ಳಿ, ನಾಗನಗೌಡ ಮಾಗನೂರ, ಹೂವನಗೌಡ ಪಾಟೀಲ, ವಸಂತರಡ್ಡಿ ಸಣ್ಣಪ್ಪನವರ, ಮಂಜನಗೌಡ ಪಾಟೀಲ, ಹನುಮಂತಪ್ಪ ಮಾಗನೂರು ಮುಂತಾದವರು ಭಾಗವಹಿಸಿದ್ದರು.

# ನೊಂದವರಿಗೆ ನೆರವು: ಅನಾರೋಗ್ಯ ಪೀಡಿತ ವ್ಯಕ್ತಿಗೆ ಶಾಸಕ ಬಿ. ದೇವೇಂದ್ರಪ್ಪ ಆರ್ಥಿಕ ಸಹಾಯ ಹಸ್ತ



ದಾ. ನಗರವಾಣಿ ಸುದ್ದಿ

ಜಗಳೂರು, ಜೂ. 19: ಪಟ್ಟಣದ ಶಾಸಕರ ಜನ ಸಂಪರ್ಕಕೇಂದ್ರದಲ್ಲಿ 'ನೊಂದವರಿಗೆನೆರವು' ಕಾರ್ಯಕ್ರಮ ದಡಿ, ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಎ. ತಾನಾಜಿ ಗೋಸಾಯಿ ಅವರಿಗೆ ಶಾಸಕ ಬಿ. ದೇವೇಂದ್ರಪ್ಪ 50,000 ರೂಪಾಯಿಗಳ ಆರ್ಥಿಕ ನೆರವು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ನೊಂದವರಿಗೆ ನೆರವು ಕಾರ್ಯಕ್ರಮದಡಿ ತಾಲ್ಲೂಕಿನ ನಿರ್ಗತಿಕರು, ಅನಾರೋಗ್ಯ ಪೀಡಿತರು, ಅನಾಥರು ಮತ್ತು ವಿಕಲಚೇತನರಿಗೆ ಸದಾ ಸಹಾಯ ಹಸ್ತ ನೀಡಲಾಗುತ್ತಿದೆ. ಬಡವರ ಕಷ್ಟಕ್ಕೆ ಸ್ಪಂದಿಸುವುದು ಜೀವನದ ಸಾರ್ಥಕತೆ. ನಾನು ಬಡತನವನ್ನು ಮೆಟ್ಟಿ ನಿಂತು ಇಂದು ಶಾಸಕನಾಗಿರುವೆ. ಹಣ, ಆಸ್ತಿ ಗಳಿಕೆಗಿಂತ ಮಿಗಿಲಾಗಿ ಮತ್ತೊಬ್ಬರಿಗೆ ಸಹಾಯ ಮಾಡುವ ಹೃದಯ ವೈಶಾಲ್ಯತೆ ಮುಖ್ಯ. ತಾಲ್ಲೂಕಿನಲ್ಲಿ ಆರಂಭಿಸಿರುವ ಈ ವಿನೂತನ ಕಾರ್ಯಕ್ರಮಕ್ಕೆ ಕ್ಷೇತ್ರದಲ್ಲಿ ದೇಣಿಗೆ ಸಂಗ್ರಹಿಸಿ, ಮುಂದಿನ ವರ್ಷಕ್ಕೆ ಒಟ್ಟು ಒಂದು ಕೋಟಿ ರೂಪಾಯಿ ನಿಧಿ ಸಂಗ್ರಹಿಸುವ ಗುರಿ ಹೊಂದಲಾಗಿದೆ" ಎಂದು ಹೇಳಿದರು.

ಕಾಲಿನ ಮೂಳೆ ನೋವಿನಿಂದ ಬಳಲುತ್ತಿರುವ ತಾನಾಜಿ ಗೋಸಾಯಿ ಅವರ ಚಿಕಿತ್ಸೆಗೆ 50 ಸಾವಿರ ರೂಪಾಯಿ ಆರ್ಥಿಕ ನೆರವು ನೀಡಿದ ಶಾಸಕರು, ಹೆಚ್ಚಿನ ಗುಣಮಟ್ಟದ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಶಿಫಾರಸು ಮಾಡುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾನಾಜಿ ಗೋಸಾಯಿ ಅವರ ಪತ್ನಿ ಜಮುನಾಬಾಯಿ, ಶಾಸಕರ ಆಪ್ತ ಸಹಾಯಕ ಗೌಸ್ ಅಹಮ್ಮದ್ ಸೇರಿದಂತೆ ಗೋಸಾಯಿ ಸಮಾಜದ ಮುಖಂಡರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು.

# ಜು.15ರೊಳಗೆ ಕ್ರಿಯಾ ಯೋಜನೆ ಸಲ್ಲಿಸಿ ವರ್ಷಾಂತ್ಯದ ಒತ್ತಡ ತಪ್ಪಿಸಿ: ಕೆ. ಗಿರೀಶ್



ದಾ ನಗರವಾಣಿ ಸುದ್ದಿ

ಹರಿಹರ : ಜು.15ರೊಳಗೆ ತಾಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಕ್ರಿಯಾ ಯೋಜನಾ ವರದಿಯನ್ನು ಸಲ್ಲಿಸುವ ಮೂಲಕ ವರ್ಷಾಂತ್ಯದ ಒತ್ತಡ ಹಾಗೂ ಕಾಮಗಾರಿಗಳು ಬಾಕಿ ಉಳಿಯುವುದನ್ನು ತಪ್ಪಿಸಬೇಕು ಎಂದು ತಾಲೂಕು ಪಂಚಾಯಿತಿ ಆಡಳಿತಾಧಿಕಾರಿ ಹಾಗೂ ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ ಕೆ. ಗಿರೀಶ್ ಸೂಚಿಸಿದರು.

ನಗರದ ತಾಲೂಕ ಪಂಚಾಯಿತಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಲಾಖೆ ಅಧಿಕಾರಿಗಳು ಯೋಜನಾ ವರದಿ ಸಲ್ಲಿಕೆಗೆ ವರ್ಷಾಂತ್ಯದವರೆಗೆ ಕಾಯದೆ ಮುಂಚಿತವಾಗಿಯೇ ಸಲ್ಲಿಕೆ ಮಾಡಿದಾಗ ಕಾಮಗಾರಿಗಳು ಪೂರ್ಣವಾಗಿ ವರ್ಷಾಂತ್ಯದ ಒತ್ತಡ ತಡೆಯಬಹುದಾಗಿದೆ ಎಂದರು.

ಲೋಕೋಪಯೋಗಿ ಇಲಾಖೆ ಮಾಹಿತಿ ಪಡೆದ ಅವರು, ಕಾಮಗಾರಿಗಳ ವಿಳಂಬ ತಪ್ಪಿಸಬೇಕು. ಮಳೆಗಾಲ ಸಮೀಪಿಸುತ್ತಿರುವುದರಿಂದ ಹಾಳಾದ ರಸ್ತೆಗಳನ್ನು ಗುರುತಿಸಿ, ಗುತ್ತಿಗೆದಾರರಿಂದ ತಗ್ಗು-ಗುಂಡಿ ಮುಚ್ಚಿಸುವ ಕೆಲಸವನ್ನು ತಕ್ಷಣ ಮಾಡಬೇಕು ಎಂದು ನಿರ್ದೇಶನ ನೀಡಿದರು.

ಕೃಷಿ ಇಲಾಖೆಯಿಂದ ಬೀಜ,ರಸಗೊಬ್ಬರಗಳ ದಾಸ್ತಾನುಗಳು, ಲೈಸನ್ಸ್ ಪಡೆದ ಸೊಸೈಟಿಗಳಿಂದ ಅವುಗಳ ಮಾರಾಟದ ಕ್ರಮ, ಬೆಳೆ ವಿಮೆ ವಿತರಣೆ ಪಾವತಿ ಮುಂತಾದವುಗಳ ಬಗ್ಗೆ ಮಾಹಿತಿ ಪಡೆದ ಅವರು, ಈ ಬಾರಿ ಮಳೆ ಪ್ರಮಾಣ ಕಡಿಮೆಯಾಗುವ ಸಾಧ್ಯತೆಗಳಿದ್ದು ರೈತರಿಗೆ ಭತ್ತ, ಅಡಿಕೆ ಬದಲಿಗೆ ಪರ್ಯಾಯ ಬೆಳೆಗಳನ್ನು ಬೆಳೆಯುವಂತೆ ಸಲಹೆ ನೀಡಲು ತಿಳಿಸಿದರು.

ಆಸ್ಪತ್ರೆ ಹಾಸ್ಟೆಲ್ ಮುಂತಾದವುಗಳ ಕಡೆ ಸ್ವಚ್ಛತೆ-ಯ ಬಗ್ಗೆ ಅಧಿಕಾರಿಗಳು ಮೇಲಿಂದ ಮೇಲೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರಬೇಕು. ಸಾಧ್ಯವಾದರೆ ನಗರಸಭೆಗೆ ಮಾಹಿತಿ ನೀಡಿ ಸರಿಪಡಿಸುವ ಕೆಲಸವನ್ನು ಮಾಡಬೇಕು ಸಾರ್ವಜನಿಕ ಆಸ್ಪತ್ರೆಗೆ ಕಾಂಪೌಂಡ್ ತುರ್ತಾಗಿ ಬೇಕಾಗಿದೆ ಎಂಬ ಸಾರ್ವಜನಿಕರ ಮನವಿ ಹಿನ್ನೆಲೆಯಲ್ಲಿ ಯೋಜನಾ ವರದಿ ತಯಾರಿಸಿ ಮೇಲಾಧಿಕಾರಿಗಳಿಗೆ ಕಳಿಸುವಂತೆ ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ಇತ್ತೀಚಿನ ಜನನ-ಮರಣ ಪ್ರಮಾಣಪತ್ರಗಳು ಬೇಗನೆ ವಿತರಣೆ-ಯಾಗುತ್ತಿದ್ದರೂ, ಹಳೆಯ ವರ್ಷಗಳ ಪ್ರಮಾಣಪತ್ರ ವಿತರಣೆ ವಿಳಂಬವಾಗುತ್ತಿರುವುದರ ಕುರಿತು ಆಸ್ಪತ್ರೆ ಅಧಿಕಾರಿಗಳಿಂದ ಮಾಹಿತಿ ಪಡೆದು ತ್ವರಿತಗತಿಯಲ್ಲಿ ವಿತರಿಸಲು ಸೂಚಿಸಿದರು..

ಸಭೆಯಲ್ಲಿ ತಾ.ಪಂ. ಇಒ ಎಚ್. ಬಸವರಾಜ್, ಬೆಸ್ಕಾಂ ಎಇ ಕೆ. ಲಕ್ಷ್ಮಪ್ಪ, ತಾಲೂಕು ಆರೋಗ್ಯಾಧಿಕಾರಿ ಡಾ. ಅಬ್ದುಲ್ ಖಾದರ್, ಪಿಡಬ್ಲ್ಯುಡಿ ಇಲಾಖೆಯ ಮರಿಸ್ವಾಮಿ, ಅರಣ್ಯ ಇಲಾಖೆಯ ಅಮೃತ, ಸಮಾಜ ಕಲ್ಯಾಣ ಇಲಾಖೆಯ ಹನುಮಂತಪ್ಪ, ಹಿಂದುಳಿದ ವರ್ಗಗಳ ಇಲಾಖೆಯ ಆಸ್ಮಾ ಬಾನು, ತೋಟಗಾರಿ-ಕೆ ಇಲಾಖೆಯ ಮಮತಾ, ಆಹಾರ ಇಲಾಖೆಯ ಮಂಜುನಾಥ್ ಸೇರಿದಂತೆ ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

# ನಕಲಿ ಜಾಹೀರಾತು ಮೂಲಕ ಜನರಿಗೆ ವಂಚನೆ: ಬಂಧನ

ದಾ. ನಗರವಾಣಿ ಸುದ್ದಿ

ದಾವಣಗೆರೆ: 'Amazon Working Benefits' ಎಂಬ ನಕಲಿ ಜಾಹೀರಾತಿನ ಮೂಲಕ ಸಾರ್ವಜನಿಕರಿಗೆ ಲಕ್ಷಾಂತರ ರೂಪಾಯಿ ವಂಚನೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ, ದಾವಣಗೆರೆ ಸೈಬರ್ ಕ್ರೈಂ ಪೊಲೀಸರು ಬೆಂಗಳೂರಿನ ಎರಡನೇ ಆರೋಪಿಯನ್ನು ಬಂಧಿಸಿದ್ದಾರೆ.

ಜನವರಿ 2025ರಲ್ಲಿ ಟೆಲಿಗ್ರಾಮ್ ಮೂಲಕ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಆಮಿಷವೊಡ್ಡಿ, ದಾವಣಗೆರೆಯ ವ್ಯಕ್ತಿಯೊಬ್ಬರಿಂದ ಹಂತ ಹಂತವಾಗಿ ಒಟ್ಟು 5.60 ಲಕ್ಷ ರೂಪಾಯಿಗಳನ್ನು ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿತ್ತು. ಈ ಕುರಿತು ದಾವಣಗೆರೆ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಎಸ್ಪಿ ಶೇಖರ್ ಎಚ್.ಟಿ. ಅವರ ಮಾರ್ಗದರ್ಶನದಲ್ಲಿ, ಸೈಬರ್ ಕ್ರೈಂ ಡಿ.ವೈ.ಎಸ್.ಪಿ. ಬಂಕಾಳಿ ನಾಗಪ್ಪ ನೇತೃತ್ವದ ಪೊಲೀಸ್ ತಂಡವು ಈ ಹಿಂದೆ ಪ್ರಮುಖ ಆರೋಪಿ ಹರೀಶ್ ಕುಮಾರ್ ಎಂ. ಎಂಬಾತನನ್ನು ಬಂಧಿಸಿತ್ತು.

ಈಗ ಪ್ರಕರಣದ ಎರಡನೇ ಆರೋಪಿ ಬೆಂಗಳೂರಿನ ಗುರುಮೂರ್ತಿ ಎಸ್. (24) ಎಂಬಾತನನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ಇಲಾಖೆ ಪ್ರಕಟಣೆ ಮೂಲಕ ತಿಳಿಸಿದೆ.

# ಸಿಲಿಂಡರ್‌ಗಳ ಸ್ಫೋಟ ಪ್ರಕರಣ ಮೂವರ ವಿರುದ್ಧ ಎಫ್‌ಐಆರ್

ದಾ ನಗರವಾಣಿ ಸುದ್ದಿ

ದಾವಣಗೆರೆ.ಜೂ.19: ದಾವಣಗೆರೆ ತಾಲೂಕಿನ ಹೆಚ್.ಕಲ್ಪನಹಳ್ಳಿಯಲ್ಲಿ ಜೂನ್ 15ರಂದು ನಡೆದಿದ್ದ ಸರಣಿ ಸಿಲಿಂಡರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆ ಗ್ರಾಮಾಂತರ ಠಾಣೆಯಲ್ಲಿ ಮೂವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಜೂನ್ 15ರ ಮಧ್ಯಾಹ್ನ ಸುಮಾರು 2 ಗಂಟೆಯ ವೇಳೆಗೆ ಹೆಚ್. ಕಲ್ಪನಹಳ್ಳಿಯ ಹೊರವಲಯದ ತೋಟದಲ್ಲಿದ್ದ ಹಳೆಯ ಅಡಿಕೆ ಗೋದಾಮಿನಲ್ಲಿ ಈ ಭೀಕರ ಅಗ್ನಿ ಆಕಸ್ಮಿಕ ಸಂಭವಿಸಿತ್ತು. ಯಾವುದೇ ರೀತಿಯ ಮುನ್ನೆಚ್ಚರಿಕೆ ಅಥವಾ ಪರವಾನಗಿ ಪಡೆಯದೆ, ಇಲ್ಲಿ ಅಕ್ರಮವಾಗಿ 50ಕ್ಕೂ ಹೆಚ್ಚು ಅಡುಗೆ ಅನಿಲ ಸಿಲಿಂಡರ್‌ಗಳನ್ನು ಸಂಗ್ರಹಿಸಿಡಲಾಗಿತ್ತು. ಅಗ್ನಿ ಅವಘಡ ಸಂಭವಿಸುತ್ತಿದ್ದಂತೆ ಗೋದಾಮಿನಲ್ಲಿದ್ದ 18 ಸಿಲಿಂಡರ್‌ಗಳು ಒಂದೊಂದಾಗಿ ಸ್ಫೋಟಗೊಂಡು ಇಡೀ ಪ್ರದೇಶವೇ ನಡುಗಿಹೋಗಿತ್ತು.

ಈ ಹಿನ್ನೆಲೆ ಆಹಾರ ನಿರೀಕ್ಷಕ ಎಸ್.ಬಿ.ರಾಘವೇಂದ್ರ ನೀಡಿದ ಅಧಿಕೃತ ದೂರಿನ ಮೇರೆಗೆ ಅಕ್ರಮ ದಂಧೆಯ ಹಿಂದೆ ಇದ್ದ ಜ್ಯೋತಿ ಗ್ಯಾಸ್ ಏಜೆನ್ಸಿ ಮಾಲೀಕ, ಜಮೀನಿನ ಮಾಲೀಕ ಶಿವಕುಮಾರ್ ಹಾಗೂ ಅಕ್ರಮವಾಗಿ ಸಿಲಿಂಡರ್ ಸಂಗ್ರಹಿಸಿದ್ದ ಪ್ರಮುಖ ಆರೋಪಿ ಅನಿಲ್ ವಿರುದ್ಧ ಗ್ರಾಮಾಂತರ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ದಾವಣಗೆರೆ ಗ್ರಾಮಾಂತರ ಪೊಲೀಸರು ಅಕ್ರಮ ಎಲ್‌ಪಿಜಿ ದಂಧೆಯ ಸಂಪೂರ್ಣ ಜಾಲವನ್ನು ಭೇದಿಸಲು ತನಿಖೆ ಮುಂದುವರಿಸಿದ್ದಾರೆ.

# ಚೀನಾದಲ್ಲೂ ಇದೆ ಘೋರ ಜಾತಿ...

(1ನೇ ಪುಟದಿಂದ)

ಕಲ್ಯಾಣ ಯೋಜನೆಗಳು ಹಾಗೂ ಆರ್ಥಿಕ ಬೆಳವಣಿಗೆಯ ಮೇಲೆ ತಾರತಮ್ಯದ ಪ್ರಭಾವ ಬೀರುತ್ತದೆ ಎಂದು ನೇರವಾಗಿ ಆರೋಪಿಸಿದ್ದಾರೆ.

ಚೀನಾ ನಿರ್ಮಿತ ಪಾಕಿಸ್ತಾನದ ತರಬೇತಿ ಜೆಟ್ ಪತನ ಪಂಜಾಬ್‌ನಲ್ಲಿ ಪತನ, ಪತನವಾದ 7ನೇ ವಿಮಾನ ಇದು!

"ಚೀನಾದಲ್ಲಿ ಅತ್ಯಂತ ಕ್ರೂರವಾದ ಜಾತಿ ಪದ್ಧತಿ ಇರುವಂತೆ ತೋರುತ್ತಿದೆ. ಚೀನಾ ತನ್ನ ಜನರಲ್ಲಿ ಸಮಾನತೆ ತರಬೇಕು," ಎಂದು ಮೋಹ್ನಿಶ್ ಎಂಬ ಬಳಕೆದಾರರು ಎಕ್ಸ್‌ನಲ್ಲಿ ಬರೆದಿದ್ದಾರೆ. ಮತ್ತೊಬ್ಬ ಯೂಸರ್, "ಚೀನಾದಲ್ಲಿ ಭಾರತದಂತದ್ದೇ ಜಾತಿ ಪದ್ಧತಿ ಇದೆ ಎಂಬುದನ್ನು ಒಪ್ಪಿಕೊಳ್ಳಬೇಕು. ಅಲ್ಲಿನ ಕೋಟ್ಯಂತರ ರೈತರು ಮೂಲಭೂತ ಸೌಕರ್ಯಗಳಿಗಾಗಿ ಒದ್ದಾಡುತ್ತಿದ್ದು, ಅವರೇ ಆ ದೇಶದ ಅತ್ಯಂತ ಕೆಳಜಾತಿಯಾಗಿದ್ದಾರೆ. ಹುಟ್ಟಿನಿಂದಲೇ ಅವರಿಗೆ ಸಮಾನ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆ," ಎಂದು ಪೋಸ್ಟ್ ಮಾಡಿದ್ದಾರೆ.

ಆದರೆ, ಕೆಲವರು ಈ ಹೋಲಿಕೆಯನ್ನು ವಿರೋಧಿಸಿದ್ದು, ಹುಕೋವ್ ವ್ಯವಸ್ಥೆಯನ್ನು ಭಾರತದ ಜಾತಿ ಪದ್ಧತಿಗೆ ಹೋಲಿಸುವುದು ತಪ್ಪು, ಅದು ಕೇವಲ ಆಡಳಿತಾತ್ಮಕ ಮತ್ತು ಆರ್ಥಿಕ ವರ್ಗೀಕರಣವೇ ಹೊರತು ಸಾಮಾಜಿಕ ರಚನೆಯಲ್ಲ ಎಂದು ವಾದಿಸಿದ್ದಾರೆ. ಭಾರತೀಯರು ತಮ್ಮದೇ ಆದ 'ನಾಲ್ಕು ಸ್ತರಗಳ ಪ್ರಾಚೀನ ಸಾಮಾಜಿಕ ವ್ಯವಸ್ಥೆ'ಯ ಕಣ್ಣುಗಳ ಮೂಲಕ ಚೀನಾವನ್ನು ನೋಡುತ್ತಿದ್ದಾರೆ ಎಂದೂ ಹೇಳಿದ್ದಾರೆ.

# ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್...

(1ನೇ ಪುಟದಿಂದ)

ನ್ಯಾಯಾಲಯಕ್ಕೆ ಪೊಲೀಸ್ ಅಧಿಕಾರಿಗಳು, ಶ್ವಾನ ದಳ ಹಾಗೂ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ ಧಾವಿಸಿ ನ್ಯಾಯಾಲಯದ ಆವರಣ, ಕಚೇರಿಗಳು ಹಾಗೂ ವಾಹನ ನಿಲ್ದಾಣ ಸೇರಿದಂತೆ ಪ್ರತಿಯೊಂದು ಮೂಲೆಯನ್ನೂ ತೀವ್ರ ಪರಿಶೀಲನೆಗೆ ನಡೆಸಿದರು.

ಪೊಲೀಸರು ಇಡೀ ನ್ಯಾಯಾಲಯ ಸಂಕೀರ್ಣವನ್ನು ತಮ್ಮ ಸುಪರ್ದಿಗೆ ಪಡೆದುಕೊಂಡು ಪರಿಶೀಲನೆ ನಡೆಸಿದರೂ ಯಾವುದೇ ಬಾಂಬ್ ಪತ್ತೆಯಾಗಿರುವುದಿಲ್ಲ ನಂತರ ಇದು ಹುಸಿ ಬಾಂಬ್ ಸಂದೇಶ ಎಂದು ನಿರ್ಧರಿಸಲಾಯಿತು. ಇದರಿಂದ ಕೋರ್ಟ್ ಕಲಾಪಗಳು ಮುಂದೂಡಲ್ಪಟ್ಟವು.

ಅದರಲ್ಲೂ ಕಳೆದ ಕೆಲ ತಿಂಗಳ ಹಿಂದೆ ತಮಿಳುನಾಡಿನಿಂದ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು, ಈಗ ಮತ್ತೆ ಕೇರಳದಿಂದ ಬಂದಿದೆ. ಕೂಡಲೇ ಈ ರೀತಿ ಬೆದರಿಕೆ ಕರೆ ಹಾಗೂ ಸಂದೇಶ ಕಳುಹಿಸುವ ಕಿಡಿಗೇಡಿಗಳನ್ನು ಬಂಧನ ಮಾಡಿ ಕಠಿಣ ಕ್ರಮ ಕೈಗೊಳ್ಳಬೇಕು ಇದರಿಂದ ನ್ಯಾಯಾಧೀಶರ ಹಾಗೂ ಕಕ್ಷಿದಾರರಿಗೆ ತೊಂದರೆ ಆಗುತ್ತಿದೆ ಎಂದು ವಕೀಲರು ಆಕ್ರೋಶ ಹೊರಹಾಕಿದರು.

# ಬಿಜೆಪಿಯಲ್ಲಿರುವ ಮೀರ್...

(1ನೇ ಪುಟದಿಂದ) ಕ್ಷಮಿಸಲು ಸಾಧ್ಯವೇ ಇಲ್ಲ. ಇದು ಹೆತ್ತ ತಾಯಿಗೆ ಮೋಸ ಮಾಡಿದಂತೆ. ಇಂತಹವರನ್ನು ಕ್ಷಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಗುಡುಗಿದ್ದಾರೆ.

ಈ ಕ್ರಾಸ್ ವೋಟಿಂಗ್‌ನಿಂದಾಗಿ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ತೀವ್ರ ಬೇಸರ ಮತ್ತು ನೋವಾಗಿದೆ. ನಮಗೂ ಕೂಡ ಅಷ್ಟೇ ನೋವುಂಟಾಗಿದೆ. ನಾವಿಬ್ಬರೂ ಈ ರಾಜಕೀಯ ದ್ರೋಹವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದೇವೆ, ನಮ್ಮ ಮೈತ್ರಿ ಅಭ್ಯರ್ಥಿ ಸೋಲುಂಡಿರುವುದು ನಮಗೆ ಅತೀವ ಬೇಸರ ತಂದಿದೆ. ನಾನೇ ಖುದ್ದಾಗಿ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಮಾತನಾಡಿ, ನೀವೇ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಎಂದು ಹೇಳಿದ್ದೆ. ಈಗ ನಮ್ಮವರೇ ಬೆನ್ನಿಗೆ ಇರಿದಿರುವುದರಿಂದ ಕುಮಾರಸ್ವಾಮಿ ಅವರಿಗೆ ಖಂಡಿತವಾಗಿಯೂ ಬೇಸರ ಇರುತ್ತದೆ. ಅವರ ಬೇಸರ ನ್ಯಾಯಯುತವಾಗಿದೆ ಎಂದರು.

# ಚುನಾವಣೆ ಗೆಲ್ಲಲು ಬಿಜೆಪಿ...

(1ನೇ ಪುಟದಿಂದ)

ಹಾಕಿರಬಹುದು. ಮೂರ್ನಾಲ್ಕು ಕಾರಣಗಳಿಂದ ಮತ ಹಾಕಿರುತ್ತಾರೆ . ಬಿಜೆಪಿಯಿಂದ ಮತ ಹಾಕಿರೋದು ಅಲ್ಲಿನ ನಾಯಕತ್ವ, ವೈಮನಸ್ಸಿನ ವಿಚಾರಕ್ಕೆ. ಆ ಕಾರಣದಿಂದ ಮತ ಹಾಕಿದ್ದಾರೆ ಎಂದರು.

ಜೆಡಿಎಸ್ ನಿಂದಲೂ ನಾಲ್ಕು ಬಂದಿದೆ, ಕಾಂಗ್ರೆಸ್ ಬಿಜೆಪಿಯಿಂದಲೂ ಏಳು ಬಂದಿರಬಹುದು. ಎಲ್ಲಾ ಸ್ವಲ್ಪ ದಿನದ ಬಳಿಕ ಬಹಿರಂಗ ಆಗುತ್ತೆ. ಯಾಕೆ ಹಾಕಿದ್ರು ಏನಕ್ಕೆ ಹಾಕಿದ್ರು ಎಲ್ಲವೂ ಗೊತ್ತಾಗುತ್ತೆ ಎಂದು ತಿಳಿಸಿದರು. ನಮ್ಮ ಅಭ್ಯರ್ಥಿಗಳಿಗೆ ಇಷ್ಟು ಮತಗಳು ಬರಲಿವೆ ಎಂದು ನಿರೀಕ್ಷೆ ಮಾಡಿರಲಿಲ್ಲ. ನಾಲ್ಕೈದು ಮತಗಳು ಬರ್ತಾವೆ ಎಂಬ ನಿರೀಕ್ಷೆ ಇತ್ತು. ಆದರೆ ಇದೀಗ ಬಂದಿರುವುದು ಆತ್ಮಸಾಕ್ಷಿಯ ಮತಗಳು. ಅವರು ಬಿಜೆಪಿಗೆ ಬಂದ್ರೆ ಅವಕಾಶ ಕಲ್ಪಿಸಬಹುದು. ಅವಕಾಶ ಬಂದಾಗ ಪಕ್ಷ ಸಿದ್ಧಾಂತ ಒಪ್ಪಿ ಬಂದ್ರೆ ಸರಿ. ಆದರೆ ಇದು ಕುದುರೆ ವ್ಯಾಪಾರ ಅಲ್ಲ ತಂತ್ರಗಾರಿಕೆ ಎಂದರು.

**ಕ್ರೈಂ ಆಫ್ ಹಿಸ್ಟರಿ**

# ಪ್ರೀತಿ ಕೊಂದ ಕೊಲೆಗಾರ! ದಾವಣಗೆರೆಯ ಚರಂಡಿಯಲ್ಲಿ ಬೆಂಗಳೂರಿನ ಯುವತಿ ದೇಹ


ಪ್ರೀತಿ ಕೊಂದ ಕೊಲೆಗಾರ!
ಪ್ರೀತಿಸಿದ ಹುಡುಗಿಯನ್ನು ಕೊಂದು ದಾವಣಗೆರೆಯ ಚರಂಡಿಯಲ್ಲಿ ಹೂತು ಹಾಕಿದ ಯುವಕನ ಬಂಧನ

## ಇದು ದೃಶ್ಯ ಸಿನಿಮಾ ರೀತಿಯ ಘಟನೆ

ಅದು 2014ರ ಜುಲೈ ತಿಂಗಳು. ದಾವಣಗೆರೆಯ ಬೂದಾಳ್ ರಸ್ತೆಯಲ್ಲಿ ಚರಂಡಿ ಕಾಮಗಾರಿ ಕೆಲಸಗಳು ನಡೆಯುತ್ತಿತ್ತು. ಅಲ್ಲಿ ಅಪರಿಚಿತ ಯುವತಿಯೊಬ್ಬಳ ಶವ ಪತ್ತೆಯಾಗಿತ್ತು! ಯಾರೀಕೆ? ಇಲ್ಲಿಗೆ ಹೇಗೆ ಬಂದಳು? ಇಡೀ ದಾವಣಗೆರೆಯನ್ನು ನಡುಗಿಸಿದ ಈ ನಿಗೂಢ ಕೊಲೆಯ ಹಿಂದಿದ್ದ ಕರಾಳ ಸತ್ಯವನ್ನು ಪೊಲೀಸರು ಕೇವಲ 24 ಗಂಟೆಗಳಲ್ಲಿ ಭೇದಿಸಿದ ಕಥೆ ಇಲ್ಲಿದೆ.

**ಮಿಸ್ಸಿಂಗ್ ಕೇಸ್ ಮತ್ತು ಮೊಬೈಲ್ ಪ್ರೀತಿ:**

ಬೆಂಗಳೂರಿನ ಬಿಸ್ಮಿಲ್ಲಾ ನಗರದ ನಿವಾಸಿಯೊಬ್ಬರ ಮಗಳು ಶಿಫಾ ಪ್ರತಿದಿನ ತಂದೆಯ ಮೊಬೈಲ್‌ನಿಂದ ಗಂಟೆಗಟ್ಟಲೆ ಒಬ್ಬನ ಜೊತೆ ಮಾತನಾಡುತ್ತಿದ್ದಳು. ಆತನೇ ದಾವಣಗೆರೆಯ ಗಾಂಧಿನಗರದ ನಿವಾಸಿ, ಕಟ್ಟಡ ಕಾರ್ಮಿಕ ಮಹಮ್ಮದ್. ಈ ಇಬ್ಬರ ಫೋನ್ ಸಂಭಾಷಣೆ ದಿನಕಳೆದಂತೆ ಗಾಢವಾದ ಪ್ರೀತಿಯಾಗಿ ಬದಲಾಗಿತ್ತು. ಮದುವೆಯಾಗಲು ಇಬ್ಬರೂ ನಿರ್ಧರಿಸಿದ್ದರು.

ತಂದೆ-ತಾಯಿಯನ್ನು ಒಪ್ಪಿಸಿ ಮದುವೆಯಾಗೋಣ ಎಂದು ನಂಬಿಸಿದ ಮಹಮ್ಮದ್, ಶಿಫಾಳನ್ನು ಬೆಂಗಳೂರಿನಿಂದ ದಾವಣಗೆರೆಗೆ ಕರೆಸಿಕೊಂಡಿದ್ದ. ಮಗಳು ಕಾಣೆಯಾದ ಬಗ್ಗೆ ಗಾಬರಿಯಾದ ತಂದೆ ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿ ಅಪಹರಣದ ದೂರು ದಾಖಲಿಸಿದ್ದರು.

**'ದೃಶ್ಯ' ಸಿನಿಮಾ ಶೈಲಿಯ ಭೀಕರ ಕೊಲೆ!**

ದಾವಣಗೆರೆಗೆ ಬಂದ ಶಿಫಾಳನ್ನು ಜಬೀರ್ ಚಿತ್ರದುರ್ಗಕ್ಕೆ ಕರೆದುಕೊಂಡು ಹೋಗಿ ದಿನವಿಡೀ ಸುತ್ತಾಡಿಸಿ, ಸಂಜೆಯಾಗುತ್ತಿದ್ದಂತೆ ಮತ್ತೆ ದಾವಣಗೆರೆಗೆ ವಾಪಸ್ ಕರೆತಂದಿದ್ದ. ಆಕೆ ಧರಿಸಿದ್ದ ವೇಲಿನಿಂದಲೇ ಕುತ್ತಿಗೆಯನ್ನು ಬಿಗಿದು ಅತ್ಯಂತ ಕ್ರೂರವಾಗಿ ಕೊಲೆ ಮಾಡಿದ. ಬಳಿಕ ಬೂದಾಳ್ ರಸ್ತೆಯಲ್ಲಿ ನಡೆಯುತ್ತಿದ್ದ ಚರಂಡಿ ಕಾಮಗಾರಿಯಲ್ಲಿ ಆಕೆಯ ದೇಹವನ್ನು ಹೂತುಹಾಕಿ, ಆಕೆಯ ಒಡವೆಗಳು ಮತ್ತು ನಗದು ಕಿತ್ತುಕೊಂಡು ಪರಾರಿಯಾಗಿದ್ದ. ಇದು ಕನ್ನಡ ದೃಶ್ಯ ಸಿನಿಮಾ ರೀತಿಯಲ್ಲಿ ನಡೆದಿದ್ದ ಕೊಲೆ ಎಂದು ಅನುಮಾನಿಸಲಾಗಿತ್ತು.

**ಆ ನಡುಕ ಹುಟ್ಟಿಸುವ ಅನುಮಾನ:**

ಈ ಕೊಲೆ ನಡೆಯುವುದಕ್ಕೆ ಕೇವಲ 17 ದಿನಗಳ ಮುಂಚೆಯಷ್ಟೇ (20 ಜೂನ್ 2014) ಸುಪ್ರಸಿದ್ಧ ಕನ್ನಡ ಚಲನಚಿತ್ರ 'ದೃಶ್ಯ-1' ಬಿಡುಗಡೆ-ಯಾಗಿತ್ತು. ಆ ಸಿನಿಮಾದಲ್ಲಿ ನಾಯಕ ಶವವನ್ನು ಯಾರಿಗೂ ಸಿಗದಂತೆ ಹೊಸದಾಗಿ ಕಟ್ಟಲಾಗುತ್ತಿದ್ದ ಪೊಲೀಸ್ ಸ್ಟೇಷನ್‌ನ ಕಾಂಕ್ರೀಟ್ ನೆಲದ ಅಡಿಯಲ್ಲಿ ಹೂತುಹಾಕುತ್ತಾನೆ.

ಇಲ್ಲಿ ದಾವಣಗೆರೆಯಲ್ಲೂ ಸಹ ಅಪರಾಧಿ ಕರಾರುವಕ್ಕಾಗಿ ಅದೇ ಶೈಲಿಯನ್ನು ಅನುಸರಿಸಿದ್ದ! ತಾನು ಕೊಲೆ ಮಾಡಿದ ಜಾಗದ ಚರಂಡಿಯಲ್ಲಿ ಮಾರನೇ ದಿನವೇ ಕಾಂಕ್ರೀಟ್ ಮಾಡುವ ಕೆಲಸ ನಡೆಯಲಿದೆ ಎಂಬುದು ಆತನಿಗೆ ಮೊದಲೇ ಗೊತ್ತಿತ್ತೇನೊ. ಒಮ್ಮೆ ಕಾಂಕ್ರೀಟ್ ಬಿದ್ದರೆ ಶವ ಇನ್ಯಾರಿಗೂ ಸಿಗುವುದಿಲ್ಲ ಎಂದು ಪ್ಲಾನ್ ಮಾಡಿ ಆತ ಹಳ್ಳ ತೋಡಿ ಹೆಣ ಮುಚ್ಚಿದ್ದ. ಹಾಗಾಗಿ ಆ ದಿನಗಳಲ್ಲಿ, ಕೊಲೆಗಾರ 'ದೃಶ್ಯ' ಸಿನಿಮಾದ ರೀತಿಯಲ್ಲೇ ಶವವನ್ನು ಹೂತುಹಾಕಿದ್ದ ಎಂದು ಅನುಮಾನಿಸಲಾಗಿತ್ತು.

**ಕೇವಲ 24 ಗಂಟೆಗಳಲ್ಲಿ ಕೊಲೆಗಾರನ ಲಾಕ್ ಮಾಡಿದ ಖಾಕಿ!:**

ರಾಜಕಾಲುವೆ ಬಳಿ ಶವ ಸಿಗುತ್ತಿದ್ದಂತೆ ದಾವಣಗೆರೆ ನಗರ ಕೇಂದ್ರ ವೃತ್ತದ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ವಿಶೇಷ ತಂಡ ರಚನೆಯಾಯಿತು. ಪೊಲೀಸರು ತಕ್ಷಣವೇ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಮಾಹಿತಿ ರವಾನಿಸಿದರು. ಬೆಂಗಳೂರಿನ ಪೊಲೀಸ್ ಠಾಣೆಯಲ್ಲಿದ್ದ ಮಿಸ್ಸಿಂಗ್ ಕೇಸ್‌ನ ಜಾಡು ಹಿಡಿದು ತನಿಖೆ ನಡೆಸಿದಾಗ, ಶಿಫಾಳ ತಂದೆ ಶವವನ್ನು ಗುರುತಿಸಿದರು.

ತಾಂತ್ರಿಕ ಆಧಾರದ ಮೇಲೆ ಆರೋಪಿ ಮಹಮ್ಮದ್ ಬೆನ್ನಟ್ಟಿದ ಪೊಲೀಸರು, ಕೇವಲ 24 ಗಂಟೆಗಳ ಒಳಗಾಗಿ ಬಂಧಿಸುವಲ್ಲಿ ಯಶಸ್ವಿಯಾದರು.

# ಆತ್ಮಹತ್ಯೆಗೆ ಜಾತಿ ನಿಂದನೆ ಕಾರಣ ಮುಖ್ಯ ಶಿಕ್ಷಕನ ಪತ್ನಿ ದೂರು

ದಾ. ನಗರವಾಣಿ ಸುದ್ದಿ

ದಾವಣಗೆರೆ: ಹರಿಹರ ತಾಲ್ಲೂಕಿನ ಕೊಕ್ಕನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ ಎಚ್. (52) ಅವರು ಶಾಲೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಘಟನೆಗೆ ಸಂಬಂಧಿಸಿದಂತೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಹಲವರು ವಿರುದ್ಧ ಪ್ರಕರಣ ದಾಖಲಾಗಿದೆ.

ಸಹೋದ್ಯೋಗಿ ಶಿಕ್ಷಕರು ಮತ್ತು ಸಿಬ್ಬಂದಿಯ ನಿರಂತರ ಮಾನಸಿಕ ಕಿರುಕುಳ ಹಾಗೂ ಜಾತಿ ನಿಂದನೆಯೇ ಸಾವಿಗೆ ಕಾರಣ ಎಂದು ಮೃತ ಶಿಕ್ಷಕರ ಪತ್ನಿ ಅಂಜಿನಮ್ಮ ನೀಡಿದ ದೂರಿನ ಮೇರೆಗೆ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣದ ಹಿನ್ನೆಲೆ: ಕೊಕ್ಕನೂರು ಶಾಲೆಯಲ್ಲಿ ಪ್ರಭಾರ ಮುಖ್ಯಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಯಪ್ಪ ಅವರು, ಶಾಲೆಯ ಆಡಳಿತ ಮತ್ತು ದಾಖಲಾತಿ ಕಾರ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದರು. ಆದರೆ, ಸಹ ಶಿಕ್ಷಕರಾದ ಶ್ರೀಕಾಂತ ಚಾರಿ, ವೆಂಕಟೇಶ, ರಜನಿ, ಚೇತನ ಕೆ.ಟಿ., ಮಹಾಂತೇಶ ಗೌಳಿ ಹಾಗೂ ಅಡುಗೆ ಸಿಬ್ಬಂದಿ ಸುಮಾ, ಚಂದ್ರಮ್ಮ, ವಿಜಯಮ್ಮ, ರೂಪಾ, ಜೊತೆಗೆ ಸಿ.ಆರ್.ಪಿ. ಮತ್ತು ಬಿ.ಆರ್.ಪಿ. ಸಿಬ್ಬಂದಿ ಸೇರಿ ಜಯಪ್ಪ ಅವರಿಗೆ ನಿರಂತರವಾಗಿ ಮಾನಸಿಕ ಹಿಂಸೆ ನೀಡುತ್ತಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಜಾತಿ ನಿಂದನೆ ಮತ್ತು ಬೆದರಿಕೆ: "ನನ್ನ ಪತಿ ಭೋವಿ ಜನಾಂಗಕ್ಕೆ ಸೇರಿದವರು ಎಂಬ ಕಾರಣ-ಕ್ಕೆ ಆರೋಪಿಗಳು ನಿರಂತರವಾಗಿ ಜಾತಿ ನಿಂದನೆ ಮಾಡುತ್ತಿದ್ದರು. ನಾವೆಲ್ಲರೂ ಹೇಳಿದಂತೆ ಕೇಳಿಕೊಂಡು ಕೆಲಸ ಮಾಡು, ಇಲ್ಲದಿದ್ದರೆ ಬಿ.ಇ.ಒ. ಅವರಿಗೆ ದೂರು ನೀಡಿ ನಿನ್ನನ್ನು ಇಲ್ಲಿಂದ ಕಿತ್ತು ಹಾಕಿಸುತ್ತೇವೆ ಎಂದು ಬೆದರಿಕೆ ಹಾಕುತ್ತಿದ್ದರು. ಈ ಮಾನಸಿಕ ಹಿಂಸೆಯನ್ನು ತಾಳಲಾರದೇ ಜೂನ್ 16ರ ಮಧ್ಯಾಹ್ನ 12:50ರ ಸುಮಾರಿಗೆ ಜಯಪ್ಪ ಶಾಲೆಯಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ" ಎಂದು ಪತ್ನಿ ಅಂಜಿನಮ್ಮ ದೂರಿನಲ್ಲಿ ಆರೋಪಿಸಿದ್ದಾರೆ.

ಮೃತ ಶಿಕ್ಷಕರ ಪತ್ನಿ ಅಂಜಿನಮ್ಮ ಅವರು ನೀಡಿದ ಲಿಖಿತ ದೂರಿನ ಮೇರೆಗೆ, ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

# ಲೈಂಗಿಕವಾಗಿ ಸಹಕರಿಸಲು ಒತ್ತಾಯ ಪೊಲೀಸ್ ಪೇದೆ ವಿರುದ್ಧ ಎಫ್.ಐ.ಆರ್

ದಾ. ನಗರವಾಣಿ ಸುದ್ದಿ

ಹರಿಹರ: ಪರಿಚಯದ ನೆಪದಲ್ಲಿ ಖಾಸಗಿ ಫೋಟೋಗಳನ್ನು ಇಟ್ಟುಕೊಂಡು, ಅವುಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿ ಲೈಂಗಿಕವಾಗಿ ಸಹಕರಿಸುವಂತೆ ಪೀಡಿಸುತ್ತಿದ್ದ ಕೆ.ಎಸ್.ಆರ್.ಪಿ. ಪೇದೆಯೊಬ್ಬನ ವಿರುದ್ಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದ ವಿವರ:

ಶಿವಮೊಗ್ಗದ 8ನೇ ಪಡೆ, ಎಫ್ ಕಂಪನಿಯಲ್ಲಿ ಪಿಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಹನುಮಂತಪ್ಪ ಸಿದ್ದಪ್ಪ ಕೂನಬೇವು ಎಂಬಾತನೇ ಆರೋಪಿ. ದೂರುದಾರರಾದ 34 ವರ್ಷದ ಮಹಿಳೆ ಮತ್ತು ಆರೋಪಿ ಕಳೆದ ಮೂರು ವರ್ಷಗಳಿಂದ ಫೋನ್ ಕರೆ ಮತ್ತು ವಾಟ್ಸಾಪ್ ಮೂಲಕ ಸಂಪರ್ಕದಲ್ಲಿದ್ದರು. ನಂತರ ಆರೋಪಿಯ ವರ್ತನೆಯಲ್ಲಿ ಬದಲಾವಣೆ ಕಂಡುಬಂದಿದ್ದು, ಆತನಿಂದ ದೂರವಾಗಲು ಮಹಿಳೆ ಪ್ರಯತ್ನಿಸಿದಾಗ ಬೆದರಿಕೆ ಹಾಕಲು ಪ್ರಾರಂಭಿಸಿದ್ದಾನೆ.

"ಮಹಿಳೆಯ ಖಾಸಗಿ ಫೋಟೋಗಳು ಮತ್ತು ವಾಟ್ಸಾಪ್ ಚಾಟ್‌ಗಳನ್ನು ಬಳಸಿಕೊಂಡು, ಅವುಗಳನ್ನು ಸೋಷಿಯಲ್ ಮೀಡಿಯಾಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ, ನಿನ್ನ ಅಪ್ಪ ಮತ್ತು ಅಣ್ಣನಿಗೆ ಕಳುಹಿಸುತ್ತೇನೆ ಎಂದು ಆರೋಪಿ ಬೆದರಿಕೆ ಹಾಕುತ್ತಿದ್ದಾನೆ" ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅಲ್ಲದೆ, ದಿನಕ್ಕೆ 100-150 ಕರೆಗಳನ್ನು ಮಾಡುತ್ತಾ, ಕರೆ ಸ್ವೀಕರಿಸದಿದ್ದರೆ ತನ್ನ ಸ್ನೇಹಿತರ ನಂಬರ್‌ಗಳಿಂದಲೂ ಕರೆ ಮಾಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾನೆ. ಈತನ ವಿಕೃತ ಮನಸ್ಥಿತಿಯ ಕಿರುಕುಳದಿಂದಾಗಿ ಮಹಿಳೆ ಪ್ರಾಣಭೀತಿಯಲ್ಲಿದ್ದು, ರಕ್ಷಣೆ ಕೋರಿ ಪೊಲೀಸ್ ಠಾಣೆ ದೂರು ದಾಖಲಿಸಿದ್ದಾರೆ.

ಮಹಿಳೆ ನೀಡಿದ ದೂರಿನ ಮೇರೆಗೆ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ದಾ. ನಗರವಾಣಿ ಸುದ್ದಿ

ದಾವಣಗೆರೆ: ಭಾರತೀಯ ಅಂಬೇಡ್ಕರ್ ಮಹಾ ಸೇನೆ ವತಿಯಿಂದ ಜೂ.27ರಂದು ನಗರದ ಗೋಲ್ಡನ್ ಪ್ಯಾಲೇಸ್‌ನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಮಹಾಸೇನೆಯ ರಾಜ್ಯಾಧ್ಯಕ್ಷ ನೂರುಲ್ಲಾ, "2025-26ನೇ ಸಾಲಿನಲ್ಲಿ ತೇರ್ಗಡೆಯಾದ ಎಲ್ಲಾ ವರ್ಗದ ವಿದ್ಯಾರ್ಥಿಗಳನ್ನು ಗುರುತಿಸಿ, ಸರ್ಕಾರಿ ಯೋಜನೆಗಳ ಕುರಿತು ಅರಿವು ಮೂಡಿಸುವ ಮತ್ತು ಅವರಲ್ಲಿ ಆತ್ಮಸ್ಥೈರ್ಯ ತುಂಬುವ ಸಣ್ಣ ಪ್ರಯತ್ನವನ್ನು ಈ ಸಮಾರಂಭದ ಮೂಲಕ ಮಾಡುತ್ತಿದ್ದೇವೆ" ಎಂದು ತಿಳಿಸಿದರು.

ಸಮಾರಂಭದಲ್ಲಿ ಒಟ್ಟು 200 ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಭಾಗವಹಿಸುವ ವಿದ್ಯಾರ್ಥಿಗಳಿಗೆ ಪುಸ್ತಕ, ಪೆನ್ನು ಮತ್ತು ಬ್ಯಾಗ್‌ಗಳನ್ನು ವಿತರಿಸಲಾಗುವುದು. ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ತೇರ್ಗಡೆಯಾದ ಟಾಪರ್ ವಿದ್ಯಾರ್ಥಿಗಳಿಗೆ ವಿಶೇಷ ಸನ್ಮಾನಿಸಲಾಗುವುದು. ಯಾವುದೇ ನಗದು ಹಣ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಮಾರಂಭದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಆಧಾರ್ ಕಾರ್ಡ್, ಮಾರ್ಕ್ಸ್ ಕಾರ್ಡ್ ಮತ್ತು ಎರಡು ಭಾವಚಿತ್ರಗಳ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ನೂರುಲ್ಲಾ (9731701686), ಅನಿಲ್ (9743305710) ಅವರನ್ನು ಸಂಪರ್ಕಿಸಬಹುದು ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನೌಷದ್, ಸದ್ದಾಮ್, ಸೈಯದ್ ಯೂಸಫ್, ಅನಿಲ್ ಕುಮಾರ್ ಇತರರು ಇದ್ದರು.